# ಬೃಹಚ್ಚರಣ

ಸಂಘದ ವಾರ್ತಾ ಪತ್ರಿಕೆ


ಅರ್ಪಣೆ



ಸರಸ್ವತಿ ನಟರಾಜನ್



ಕೆ. ಮಂಜುನಾರಾಯಣ್


ಸಂಪುಟ : 17 ಸಂಚಿಕೆ : 1 ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್ 2026



E-mail : queries@mmdbs.in magazines@mmdbs.in web : www.mmdbs.in



## ವಿಶೇಷಾಂಕ



ಗಿರಿಜಾ ಕಲ್ಯಾಣ



ಒಂದು ದಿನದ ಪ್ರವಾಸ



ನಾಗಾರಾಧನೆ

## ಅಧ್ಯಕ್ಷರ ನುಡಿ

ಆತ್ಮೀಯ ಬಂಧು ಬಾಂಧವರಿಗೆ ನಮಸ್ಕಾರಗಳು.

ನೂತನ "ಪರಾಭವ" ನಾಮ ಸಂವತ್ಸರದ ಸಂದರ್ಭದಲ್ಲಿ ನಿಮಗೆಲ್ಲ ಶುಭಾಶಯಗಳು!

ಅನೇಕ ವರ್ಷಗಳು ನಮ್ಮ ನಡುವೆ ಇದ್ದು, ಸಂಘದ ಬೆಳವಣಿಗೆಗೆ ಸದ್ದಿಲ್ಲದೇ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡುತ್ತಿದ್ದ ಇಬ್ಬರು ಕಾರ್ಯಕಾರಿ ಸಮಿತಿಯ ಸದಸ್ಯರು ಹಠಾತ್ತಾಗಿ ನಮ್ಮನ್ನಗಲಿದ್ದಾರೆ.

ಸಂಘವು ಹಮ್ಮಿಕೊಳ್ಳುವ ಯಾವುದೇ ಕಾರ್ಯಕ್ರಮವಿದ್ದರೂ ಶ್ರೀಮತಿ ಸರಸ್ವತಿ ನಟರಾಜನ್ ಅವರು ಅದರ ಹಿನ್ನೆಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೊತೆಗೆ ಇನ್ನಷ್ಟು ಸದಸ್ಯರನ್ನು ಸೇರಿಸಿಕೊಂಡು ಕಾರ್ಯಕ್ರಮವು ಸುಸೂತ್ರವಾಗಿ ಜರುಗಲು ಶ್ರಮಿಸುತ್ತಿದ್ದುದು ನಮ್ಮೆಲ್ಲರಿಗೂ ಸ್ಪೂರ್ತಿಯಾಗಿದ್ದಿತು.

ಶ್ರೀ ಮಂಜುನಾರಾಯಣ್ ಅವರು ತಮ್ಮ ಸ್ವಭಾವಕ್ಕೆ ತಕ್ಕಂತೆ ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಹೆಚ್ಚು ಮಾತಿಲ್ಲದೇ ಭಾಗವಹಿಸುತ್ತಾ, ಆಗೊಮ್ಮೆ ಈಗೊಮ್ಮೆ ತಮ್ಮ ಅಭಿಪ್ರಾಯಗಳನ್ನು ಸೌಮ್ಯವಾಗಿ ಮಂಡಿಸುತ್ತಾ, ತಮ್ಮ ನೆರವು ನೀಡುತ್ತಾ ಅನೇಕ ವರ್ಷಗಳಕಾಲ ಸಂಘಕ್ಕೆ ಸೇವೆ ಸಲ್ಲಿಸಿದರು.



ನಮ್ಮನ್ನಗಲಿರುವ ಈ ಸಜ್ಜನರಿಗೆ ಭಗವಂತನು ಸದ್ಗತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಈ ಸಂಚಿಕೆಯನ್ನು ಇವರಿಗೆ ಅರ್ಪಿಸಿದ್ದೇವೆ. ಇವರುಗಳ ಬಗ್ಗೆ ಲೇಖನಗಳು ಪುಟ 11 ಮತ್ತು ಪುಟ 12 ರಲ್ಲಿ ಪ್ರಕಟವಾಗಿವೆ.

ಎಲ್ಲರಿಗೂ ನಮಸ್ಕಾರಗಳು.

ಕೆ.ಎಸ್. ಅರುಣ್
ಅಧ್ಯಕ್ಷರು

## ಸಂಪಾದಕೀಯ


ಸಂಘದ ಸದಸ್ಯರಿಗೆ ನಮಸ್ಕಾರಗಳು.

ನಿಮಗೆಲ್ಲ ನೂತನ ಸಂವತ್ಸರವು ಆಯುರಾರೋಗ್ಯಗಳನ್ನು ತರಲೆಂದು ಆಶಿಸುತ್ತೇನೆ.

ಕಳೆದ ವರ್ಷದ ಸೆಪ್ಟೆಂಬರ್–ಅಕ್ಟೋಬರ್ ತಿಂಗಳಿನಲ್ಲಿ "ಸುವರ್ಣ ಸಂಚಿಕೆ" ಯ ಪ್ರಕಟಣೆ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಾಗ ಅದರ ಕಾರ್ಯ ಬಾಹುಳ್ಯವನ್ನು ನೋಡಿ ಇದು ನನ್ನಿಂದಾಗುವ ಕೆಲಸವೇ ಎನ್ನಿಸುತ್ತಿತ್ತು. ಕ್ರಮೇಣ ಸುವರ್ಣ ಸಂಚಿಕೆ ಉಪಸಮಿತಿಯಿಂದ, ಅನ್ಯ ಸದಸ್ಯರಿಂದ ಲಭ್ಯವಾಗುತ್ತಿದ್ದ ಮುಕ್ತ, ಉತ್ಸಾಹಪೂರ್ಣ ನೆರವು, ಸಹಕಾರಗಳಿಂದ ಮತ್ತು ಅನುಭವಿಗಳ ಮಾರ್ಗದರ್ಶನದಿಂದ ಮಾತ್ರವೇ ಪ್ರಕಟಣೆಯು ಸಾಧ್ಯವಾಯಿತು. ಈ ರೀತಿ ನೆರವಾದ ಉಪಸಮಿತಿಯ ಸದಸ್ಯರಿಗೆ ಮತ್ತು ಇತರ ಎಲ್ಲ ಮಹನೀಯ–ಮಹಿಳೆಯರಿಗೆ ನನ್ನ ಮನದಾಳದ ಕೃತಜ್ಞತೆಗಳು.

ಈಗ "ಬೃಹಚ್ಚರಣ" ದ 51ನೆಯ ಸಂಚಿಕೆಯನ್ನು ನಿಮ್ಮ ಕೈಗಿಡಲು ಸಂತಸವಾಗುತ್ತಿದೆ. ಇದನ್ನು ಎಂದಿನಂತೆ ಸಹೃದಯತೆಯಿಂದ ಸ್ವಾಗತಿಸಬೇಕೆಂದು ಕೋರುತ್ತೇನೆ.

ಎಲ್ಲರಿಗೂ ಒಳ್ಳೆಯದಾಗಲಿ



–ಬಿ. ಸುಬ್ರಹ್ಮಣ್ಯಂ
ಸಂಪಾದಕರು

ಛಾಯಾಗ್ರಹಣ : ಎನ್. ಶಿವಕುಮಾರ್

# 50 ವರ್ಷಗಳ ದಾಂಪತ್ಯವನ್ನು ಪೂರೈಸಿದ ದಂಪತಿಗಳಿಗೆ ಗೌರವ ಸಮರ್ಪಣೆ



ಶ್ರೀಮತಿ ಸರಸ್ವತಿ ಮತ್ತು ಶ್ರೀ ನಟರಾಜನ್



ಶ್ರೀಮತಿ ಜಯಶ್ರೀ ಮತ್ತು ಶ್ರೀ ಸೋಮಸುಂದರ



ಶ್ರೀಮತಿ ಸರಸ್ವತಿ ಮತ್ತು ಶ್ರೀ ಶ್ರೀನಿವಾಸನ್



ಶ್ರೀಮತಿ ವೈಜಯಂತಿ ಮಾಲಾ ಮತ್ತು ಶ್ರೀ ಸೇತೂರಾಮ್



ಶ್ರೀಮತಿ ನಾಗರತ್ನ ಮತ್ತು ಶ್ರೀ ಶೇಷಗಿರಿ ಅಯ್ಯ



ಶ್ರೀಮತಿ ವಿದ್ಯಾ ಮತ್ತು ಶ್ರೀ ನಾಗರಾಜ್



ಉಳಿದ ಚಿತ್ರಗಳು ಪುಟ 47ರಲ್ಲಿ

## ಮೈ.ಮಂ.ದ್ರಾ.ಬೃಹಚ್ಚರಣ ಸಂಘ
**(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)**

### ಕಾರ್ಯಕಾರಿ ಸಮಿತಿ

**ಪದಾಧಿಕಾರಿಗಳು**

**ಕೆ.ಎಸ್. ಅರುಣ್, 6366037069**
ಅಧ್ಯಕ್ಷರು

**ಹೆಚ್.ಕೆ. ಶಶಿಧರ್, 9845173766**
ಉಪಾಧ್ಯಕ್ಷರು

**ಆರ್.ಎ. ಶ್ಯಾಮಸುಂದರ್, 9845205674**
ಕಾರ್ಯದರ್ಶಿ

**ನಾಗೇಶ, 9980662118**
ಸಹ ಕಾರ್ಯದರ್ಶಿ

**ಎಸ್. ಸತ್ಯನಾರಾಯಣ, 9980945699**
ಖಜಾಂಚಿ

**ವಿ. ಅರುಣ್, 9880166001**
ಸಹ ಖಜಾಂಚಿ

**ಎನ್. ಶಿವಕುಮಾರ್, 9886505505**
ಆಂತರಿಕ ಲೆಕ್ಕ ಪರಿಶೋಧಕರು

**ಸದಸ್ಯರು**

**ಎಸ್. ಸೋಮಸುಂದರ, 9900113298**
**ಎಸ್.ಸಿ. ಶ್ರೀನಿವಾಸ, 9483725949**
**ಬಿ. ಸುಬ್ರಹ್ಮಣ್ಯಂ, 9449869667**
**ಕೆ.ಬಿ.ಎಸ್. ಶರ್ಮ, 9482087344**
**ಟಿ.ಪಿ. ಸೂರ್ಯನಾರಾಯಣ್, 9945484268**
**ಆರ್. ಗಣೇಶ್ ಶ್ರೀಧರ್, 9880187686**
**ಆರ್. ರಮೇಶ್, 9886034048**
**ಹೆಚ್.ಆರ್. ಲಲಿತಾ, 9945199637**
**ಆರ್.ಪಿ. ರವಿಶಂಕರ್, 9449696664**
**ಎಸ್.ಆರ್. ವಿಜಯಕುಮಾರ್, 9449505463**
**ಆರ್.ಎಸ್. ವೆಂಕಟೇಶ್, 9620208733**
**ಹೆಚ್.ಜಿ. ಅರುಣ್, 9845371728**
**ನಿತಿನ್ ಭಾಸ್ಕರ್, 9844417333**

**ಲೆಕ್ಕ ಪರಿಶೋಧಕರು**

**ಬಿ.ಎನ್. ಗೋವಿಂದ ಪ್ರಸಾದ್, 9845128229**

"ಬೃಹಚ್ಚರಣ" ಪತ್ರಿಕೆಯ ಸಂಪಾದಕ ಮಂಡಳಿ
**ಬಿ. ಸುಬ್ರಹ್ಮಣ್ಯಂ, 9449869667** – ಸಂಪಾದಕರು
**ಎಸ್.ಸಿ. ಶ್ರೀನಿವಾಸ, 9483725949** – ಸದಸ್ಯರು
**ಎನ್. ಶಿವಕುಮಾರ್, 9886505505** – ಸದಸ್ಯರು
**ಹೆಚ್.ಆರ್. ಲಲಿತಾ, 9945199637** – ಸದಸ್ಯರು
**ಸಂಘದ ಅಧ್ಯಕ್ಷರು, 9900313929**
**ಸಂಘದ ಕಾರ್ಯದರ್ಶಿಗಳು, 9845205674**

## ವಧೂ–ವರ ಸಂಪದ

ಸಂಘದ ಸದಸ್ಯರಿಗೆ ನಮಸ್ಕಾರಗಳು!

ಬೃಹಚ್ಚರಣ ಪಂಗಡದಲ್ಲಿನ ವಿವಾಹಯೋಗ್ಯ ವಧೂ–ವರರ ಮಾಹಿತಿಯನ್ನು ಪ್ರಕಟಿಸಿದ್ದೇವೆ. ಪ್ರಕಟಿಸಲ್ಪಡುವ ಮಾಹಿತಿ ಇಂತಿರುತ್ತದೆ.

ವಧು / ವರರ ಹೆಸರು, ತಂದೆ ಮತ್ತು ತಾಯಿಯ ಹೆಸರು, ಗೋತ್ರ, ನಕ್ಷತ್ರ, ರಾಶಿ, ವಯಸ್ಸು, ಜನ್ಮದಿನ, ಎತ್ತರ, ವಿದ್ಯಾರ್ಹತೆ, ಉದ್ಯೋಗ ಮತ್ತು

ಸಂಪರ್ಕ ಮಾಹಿತಿ (ಹೆಸರು, ಮೊಬೈಲ್ ನಂ., / ಇ–ಮೇಲ್)

ಮೇಲ್ಕಾಣಿಸಿದ ಮಾಹಿತಿಗಳನ್ನು ಕಳುಹಿಸಿದಲ್ಲಿ ಅವುಗಳನ್ನು ಬೃಹಚ್ಚರಣ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ಆಸಕ್ತರು ಈ ಮಾಹಿತಿಗಳನ್ನು ಬಳಸಿಕೊಂಡು ಮುಂದುವರೆಯಬಹುದು.

ಪ್ರಕಟಿಸಬೇಕಾದ ಮಾಹಿತಿಯನ್ನು

Editor
**"Bruhacharana Sanchike"**
#27/1, Bull Temple Road, Basavanagudi, Bengaluru 560004. ಈ ವಿಳಾಸಕ್ಕೆ ಅಂಚೆಯ ಮೂಲಕ ಅಥವಾ ಇ–ಮೇಲ್ ಖಾತೆ magazines@mmdbs.in ಗೆ ಕಳುಹಿಸಬೇಕು.

**ಈ ವರ್ಷದ ಫೆಬ್ರವರಿ ತಿಂಗಳಲ್ಲಿ ನಡೆದ ನಾಗಾರಾಧನೆಯ ಸಂದರ್ಭದಲ್ಲಿನ ಪ್ರಾಯೋಜಕರ ವಿವರಗಳು ಇಂತಿವೆ.**

ಸಂಘದ ಪೋಷಕ ಶ್ರೀ ಸೋಮಸುಂದರ ಅವರು ಅಂದಿನ ವಡೆ ಪ್ರಸಾದವನ್ನು ಪ್ರಾಯೋಜಿಸಿದರು. ಸದಸ್ಯರಾದ ಶ್ರೀ ಎಲ್. ಶ್ರೀನಾಥ್ ಅವರು ಅಂದಿನ ಕುಡಿಯುವ ನೀರನ್ನು ಪ್ರಾಯೋಹಿಸಿದರು. ಅಲ್ಲದೇ ಹಿರಿಯ ಸದಸ್ಯ ಶ್ರೀ ಅಶ್ವತ್ಥನಾರಾಯಣ ಕುಟುಂಬದವರು ಅಂದು ವಿತರಿಸಲಾದ ಸಿಹಿ ತಿನಿಸು ಒಬ್ಬಟ್ಟನ್ನು ಪ್ರಾಯೋಜಿಸಿದರು
ಕಾರ್ಯಕಾರಿ ಸಮಿತಿಯು ಈ ಮಹನೀಯರ ಉದಾರ ಕೊಡುಗೆಗಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುತ್ತಾ ಇವರಿಗೆ ಭಗವಂತನು ಆಯುರಾರೋಗ್ಯಗಳನ್ನು ಅನುಗ್ರಹಿಸಲೆಂದು ಹಾರೈಸುತ್ತದೆ.

**ವಾರ್ಷಿಕ ನಿರ್ವಹಣಾ ವೆಚ್ಚ**

ಕಾರ್ಯಕಾರಿ ಸಮಿತಿಯ ಮನವಿಯನ್ನು ಮನ್ನಿಸಿ ಹಲವಾರು ಸದಸ್ಯರು ವಾರ್ಷಿಕ ನಿರ್ವಹಣಾ ವೆಚ್ಚವನ್ನು (A.M.F. ಅನ್ನು) ಪಾವತಿಸಿದ್ದಾರೆ. ಅವರೆಲ್ಲರಿಗೂ ಸಮಿತಿಯ ಪರವಾಗಿ ಧನ್ಯವಾದಗಳು.


ಹಾಲಿ ವಿತ್ತವರ್ಷ ಮತ್ತು ಹಿಂದಿನ ವರ್ಷಗಳ A.M.F. ಅನ್ನು ಇನ್ನೂ ಪಾವತಿಸಿಲ್ಲದಿರುವ ಸದಸ್ಯರು ಸದರೀ ಮೊತ್ತವನ್ನು (ವಾರ್ಷಿಕ 500/– ರೂ.ಗಳನ್ನು) ದಯವಿಟ್ಟು ಪಾವತಿಸಬೇಕಾಗಿ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಧನ್ಯವಾದಗಳು

**ಆರ್.ಎ. ಶ್ಯಾಮಸುಂದರ್**
**ಕಾರ್ಯದರ್ಶಿಗಳು**

| ಸಂಘದ ಸದಸ್ಯತ್ವ ಶುಲ್ಕ | |
|---|---|
| ಮಹಾ ಪೋಷಕರು | – ₹ 25,000/– |
| ಪೋಷಕರು | – ₹ 5,000/– |
| ಸದಸ್ಯತ್ವ | – ₹ 1,000/– |
| ವಾರ್ಷಿಕ ನಿರ್ವಹಣೆ | – ₹ 500/– |

## ಗಿರಿಜಾ ಕಲ್ಯಾಣ ಮತ್ತು ಐವತ್ತು ವರ್ಷ ವೈವಾಹಿಕ ಜೀವನ ಪೂರೈಸಿದ ದಂಪತಿಗಳಿಗೆ ಗೌರವ ಸಮರ್ಪಣೆ



ಬೃಹಚ್ಚರಣ ಸಂಘವು ತಾ॥ 28/12/2025 ಭಾನುವಾರದಂದು ಸಮುದಾಯದವರ ಒಳಿತಿಗಾಗಿ ಮತ್ತು ಲೋಕಕಲ್ಯಾಣಕ್ಕಾಗಿ ಬಸವನಗುಡಿಯ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿರುವ ಶ್ರೀ ಭ್ರಮರಾಂಬಿಕ ಸದನದಲ್ಲಿ "ಗಿರಿಜಾ ಕಲ್ಯಾಣ" ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಂಘದ ಸದಸ್ಯರು ಮತ್ತು ಸಮುದಾಯದವರು ಈ ಸಮಾರಂಭದಲ್ಲಿ ಭಕ್ತಿಭಾವ, ಉತ್ಸಾಹದಿಂದ ಪಾಲ್ಗೊಂಡರು. ಸರಿಸುಮಾರು 160 ಮಂದಿ ಕಲ್ಯಾಣಕ್ಕಾಗಿ ಸಂಕಲ್ಪಿಸಿದ್ದರು.

ಬೆಳಿಗ್ಗೆ 9 ಘಂಟೆಗೆ ಮಂಗಳವಾದನದೊಂದಿಗೆ ಗಿರಿಜಾ ಕಲ್ಯಾಣವು ಚಿ॥ ಸಮಾಹಿತರ ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭವಾಯಿತು. ಕ್ಷೇತ್ರ ದೇವತೆಗಳಾದ ಶ್ರೀಮಹಾಗಣಪತಿ, ಶ್ರೀಮಲ್ಲಿಕಾರ್ಜುನ, ಶ್ರೀಭ್ರಮರಾಂಬ ದೇವರುಗಳಿಗೆ ಅಭಿಷೇಕ, ಅಲಂಕಾರಗಳೂ ಈ ಹೊತ್ತಿಗೆ ನಡೆದಿದ್ದವು. ಗಿರಿಜಾ ಕಲ್ಯಾಣಕ್ಕೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಎಸ್.ಸಿ ಶ್ರೀನಿವಾಸ ಮತ್ತು ಶ್ರೀಮತಿ ಮಂಜುಳಾ ದಂಪತಿಗಳು ವಧುವಾದ ಗಿರಿಜೆಯ ಕಡೆ ಹಾಗೂ ಸಂಘದ ಮಹಾ ಪೋಷಕರಾದ ಶ್ರೀ ಉಮೇಶ್ ಮತ್ತು ಶ್ರೀಮತಿ ಗಾಯಿತ್ರಿ ದಂಪತಿಗಳು ವರನಾದ ಪರಮೇಶ್ವರನ ಕಡೆ ಕಲ್ಯಾಣದಲ್ಲಿ ಸಮುದಾಯದ ಪರವಾಗಿ ಪಾಲ್ಗೊಂಡು ನೆರವೇರಿಸಿದರು. ಮಾಂಗಲ್ಯಧಾರಣೆಯ ನಂತರ ವಿಶೇಷವಾಗಿ ವಧು–ವರರ ಚೆಂಡಾಟದ ಕ್ರೀಡೆ ಈ ಕಾರ್ಯಕ್ರಮದ ಭಾಗವಾಗಿರುತ್ತದೆ. ಇದು ಭಗವಂತನ ಲೀಲೆ ಎಂಬಂತೆ ವಿನೋದವಾಗಿ ಪೂರ್ಣಭಾವದಿಂದ ಪುರೋಹಿತರು ಪುಷ್ಪ ಮತ್ತು ತುಳಸಿಯಿಂದ ಮಾಡಿದ್ದ ಚೆಂಡನ್ನು ನೆರೆದಿದ್ದ ಭಕ್ತರ ಕಡೆಗೆ ಕಳಿಸಿ ಅವರು ಆಟದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಈ ಘಳಿಗೆ ಗಿರಿಜಾ ಕಲ್ಯಾಣದ ಅವಿಸ್ಮರಣೀಯ ಅಂಗವಾಗಿತ್ತು. ನೆರೆದಿದ್ದವರು ತಾವು ಗಿರಿಜಾ ಮತ್ತು ಪರಮೇಶ್ವರರ ಸಾಕಾರ ಮೂರ್ತಿಯೊಂದಿಗೆ ಆಟವಾಡುತ್ತಿರುವಂತೆ ಭಾವಿಸಿಕೊಂಡು ಪುನೀತರಾದರು. ಬಂದಿದ್ದ ಸಮುದಾಯದವರು ತಮ್ಮ ಬಂಧು–ಬಾಂಧವರೊಂದಿಗೆ ಗಿರಿಜಾ–ಪರಮೇಶ್ವರರಿಗೆ ಭಕ್ತಿ ಭಾವದಿಂದ ನಮಸ್ಕರಿಸಿದರು. ನಂತರ ದೇವದಂಪತಿಗಳಿಗೆ ವೇದಿಕೆಯ ಮೇಲಿದ್ದ ಪುರೋಹಿತರು, ಸಮುದಾಯವನ್ನು ಪ್ರತಿನಿಧಿಸಿದ ದಂಪತಿಗಳು ಮತ್ತು ಇತರರು ಧನ್ಯತಾಪೂರ್ವಕವಾಗಿ ಸುಶ್ರಾವ್ಯವಾದ ವಾದ್ಯ ಮೇಳದ ಜೊತೆಗೆ ತಾಂಡವ ನೃತ್ಯ ಪ್ರಿಯರಾದ ಪಾರ್ವತಿ–ಪರಮೇಶ್ವರರಿಗೆ ತನ್ಮಯತೆಯಿಂದ ನರ್ತಿಸುತ್ತಾ ಹೂಮಾಲೆ ಸಮರ್ಪಿಸಿದರು. ಸಭಾಂಗಣದಲ್ಲಿ ನೆರೆದಿದ್ದ ಸಮುದಾಯದವರು ತದೇಕಚಿತ್ತದಿಂದ ಗಿರಿಜಾ ಕಲ್ಯಾಣವನ್ನು ಕೈಲಾಸದಲ್ಲಿ ನಡೆಯುತ್ತಿದೆ ಎಂಬ ಭಾವದಿಂದ ವೀಕ್ಷಿಸುತ್ತಿದ್ದರು. ಪುರೋಹಿತರು ಎಲ್ಲಾ ಪೂಜಾ ಕಾರ್ಯಕ್ರಮಗಳನ್ನು ವೈದಿಕ ಮಂತ್ರಪೂರ್ವಕವಾಗಿ ಮಾಡುತ್ತಾ ಅವುಗಳ ಅರ್ಥವನ್ನು ಕನ್ನಡದಲ್ಲಿ ವಿವರಿಸುತ್ತಿದ್ದುದು ಇದಕ್ಕೆ ಕಾರಣವಾಗಿತ್ತು. ಮೊದಲು ವರನಾದ ಪರಮೇಶ್ವರನ ಆವಾಹನೆ, ಸ್ಥಾಪನೆ, ಮಂಗಳಾರತಿ ಆದ ಮೇಲೆ ಕಲ್ಯಾಣ ಮಂಟಪಕ್ಕೆ ವಧುವಾದ ಗಿರಿಜೆಯನ್ನು ಮಂಗಳ ವಾದ್ಯ ಮತ್ತು ಮೆರವಣಿಗೆಯ ಮೂಲಕ ಕರೆತಂದು ವಧು–ವರರನ್ನು ಎದುರು–ಬದುರಾಗಿ ಸ್ಥಾಪಿಸಿದರು. ನಂತರ ಮಾಲಾ ವಿನಿಮಯ ಕಾರ್ಯಕ್ರಮ ನೆರವೇರಿಸಿದರು. ಧಾರೆ ಸಮಯದಲ್ಲಿ ಪರಮೇಶ್ವರ–ಗಿರಿಜೆಯ ಪ್ರವರಗಳನ್ನು ಪುರೋಹಿತರು ಪಠಿಸಿದರು. ಧಾರೆಯಾದ ನಂತರ ಮಾಂಗಲ್ಯ ಧಾರಣೆಗೆ ಮುಂಚೆ ಪುರೋಹಿತರು ಭಕ್ತಾದಿಗಳಿಗೆ ಮಾಂಗಲ್ಯದರ್ಶನ ಭಾಗ್ಯ ಕರುಣಿಸಿದರು. ಇದೇ ಸಮಯದಲ್ಲಿ ಮಂಗಳ ವಾದ್ಯದವರು ಪುರೋಹಿತರ ಸಲಹೆಯಂತೆ ಸಾಂದರ್ಭಿಕ ರಾಗಗಳನ್ನು ನುಡಿಸಿ ಭಗವಂತನಿಗೆ ತಮ್ಮ ಸಂಗೀತ ಸೇವೆಯನ್ನು ಸಮರ್ಪಿಸಿದರು. ನೆರೆದಿದ್ದ ಎಲ್ಲಾ ಭಕ್ತರು ತಮ್ಮ ತಮ್ಮ ಆಶಯಗಳನ್ನು ನಿವೇದಿಸಿಕೊಂಡು ನಮಸ್ಕರಿಸುತ್ತಿದ್ದರು. ಪುರೋಹಿತರಾದ ಶ್ರೀಯುತ ಸುಬ್ರಹ್ಮಣ್ಯ ಶರ್ಮ ಕಡೂರು, ಮತ್ತು ಶ್ರೀ ಸುನೀಲ್‌ರವರುಗಳು ಕಲ್ಯಾಣ ಕೈಂಕರ್ಯಕ್ಕೆ ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಕಲ್ಯಾಣಕ್ಕೆ ಸಂಕಲ್ಪಿಸಿದ್ದವರ ಹೆಸರು, ಗೋತ್ರ, ನಕ್ಷತ್ರ, ರಾಶಿಗಳನ್ನು ಓದಿ ಸಂಕಲ್ಪ ನೆರವೇರಿಸಿದರು. ಇವರುಗಳಿಗೆ ಪ್ರಸಾದರೂಪವಾಗಿ ಕೊಡುವ ನಂದಿ ವಿಗ್ರಹಗಳಿಗೆ, (ವಿಭೂತಿಯನ್ನು ತಟ್ಟೆಯಲ್ಲಿಟ್ಟು) ಅವುಗಳಿಗೂ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘದ


ವತಿಯಿಂದ ಸಂಘದ ಹಿರಿಯ ಸದಸ್ಯರುಗಳಾದ ಡಾ॥ ಸ್ವಾಮಿನಾಥ್, ಶ್ರೀ ಹೆಚ್.ಡಿ. ಗಣೇಶ್, ಶ್ರೀ ಸತ್ಯಮೂರ್ತಿ ಮತ್ತು ಇತರರು "ಬೃಹಚ್ಚರಣ" ಪತ್ರಿಕೆಯ ಸುವರ್ಣ ಸಂಚಿಕೆ ಹಾಗೂ 2026ರ ಕ್ಯಾಲೆಂಡರನ್ನು ಬಿಡುಗಡೆ ಮಾಡಿದರು. ತದನಂತರ ಸುಮಾರು 290 ಸುವರ್ಣ ಸಂಚಿಕೆ ಹಾಗೂ ಕ್ಯಾಲೆಂಡರ್‌ಗಳನ್ನು ಸಮುದಾಯದ ಸದಸ್ಯರಿಗೆ ವಿತರಿಸಲಾಯಿತು.

ಸುವರ್ಣ ಸಂಚಿಕೆಯಲ್ಲಿ ಪ್ರಕಟಣೆಗಾಗಿ ಶೃಂಗೇರಿ ಮಹಾಸಂಸ್ಥಾನದಿಂದ ಆಶೀರ್ವಾದಪೂರ್ವಕ ಸಂದೇಶ ಮತ್ತು ಹರಿಹರಪುರದ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳ ಅನುಗ್ರಹ ಸಂದೇಶಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿದ್ದ ಶ್ರೀಮತಿ ಸರಸ್ವತಿ ನಟರಾಜನ್ ಅವರು ಸಭೆಗೆ ಓದಿ ತಿಳಿಸಿದರು.

ಗಿರಿಜಾ ಕಲ್ಯಾಣವು ಇಷ್ಟು ಭಕ್ತಿಭಾವದಿಂದ ಅಚ್ಚುಕಟ್ಟಾಗಿ ನೆರವೇರಲು ಸಮುದಾಯದವರು ತನು, ಮನ ಮತ್ತು ಧನ ಸಹಾಯ ನೀಡಿ ಸಹಕರಿಸಿದರು. ಈ ಕಾರ್ಯದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಸ್ ಅರುಣ್, ಕಾರ್ಯದರ್ಶಿಗಳಾದ ಶ್ರೀ ಶ್ಯಾಮಸುಂದರ್‌ರವರು ಸಂದರ್ಭೋಚಿತ ಸಲಹೆ ನೀಡಿ ಕಾರ್ಯರೂಪಕ್ಕೆ ತರುವುದರಲ್ಲಿ ಕಾರ್ಯಕಾರಿ ಸಮಿತಿಯೊಂದಿಗೆ ಮಾರ್ಗದರ್ಶಕರಾಗಿ ಭಾಗಿಯಾಗಿದ್ದರು. ಈ ಕಲ್ಯಾಣೋತ್ಸವವು ವಿಜೃಂಭಣೆಯಾಗಿ ನಡೆದು ಪಾಲ್ಗೊಂಡವರ ಮನದಲ್ಲಿ ಚಿರವಾಗಿ ನಿಲ್ಲಲು ಸಹಕರಿಸಿದ ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಪದಾಧಿಕಾರಿಗಳಾದ ಶ್ರೀಯುತರಾದ ರಾಜಣ್ಣ ಮತ್ತು ನಾರಾಯಣ್‌ರವರಿಗೆ ಧನ್ಯವಾದಗಳು. ಪ್ರಸಾದ ಭೋಜನವನ್ನು ರುಚಿಕರವಾಗಿ ತಯಾರಿಸಿ, ಪ್ರತಿ ಪಂಕ್ತಿಗೂ ಸಾವಧಾನದಿಂದ ಉಣಬಡಿಸಿದರು. ಅಲ್ಲದೆ, ನಿರೀಕ್ಷೆಯನ್ನು ಮೀರಿದ ಸಂಖ್ಯೆಯಲ್ಲಿ ಸದಸ್ಯರು ಆಗಮಿಸಿದಾಗ್ಯೂ ಯಾವ ಪಂಕ್ತಿಗೂ ಯಾವ ಪದಾರ್ಥವೂ ಕಡಿಮೆಯಾಗದಂತೆ ನಿರ್ವಹಿಸಿದರು. ಇದಕ್ಕಾಗಿ ದೇವಸ್ಥಾನದ ಬಾಣಸಿಗರಿಗೆ ಸಂಘದಿಂದ ಕೃತಜ್ಞತಾಪೂರ್ವಕ ಧನ್ಯವಾದಗಳು. ಕಲ್ಯಾಣದ ಹಿಂದಿನ ದಿನ ಪೂರ್ವ ತಯಾರಿಗೆ ಸ್ವಯಂ ಸೇವಿಕೆಯರಾಗಿ ಬಂದಿದ್ದ ಸಮುದಾಯದ ಮಹಿಳೆಯರಿಗೆ ಕಾರ್ಯಕಾರಿ ಸಮಿತಿಯ ಧನ್ಯವಾದಗಳು. ಗಿರಿಜಾ ಕಲ್ಯಾಣ ಕಾರ್ಯಕ್ರಮವು ಸುಲಲಿತ ಹಾಗೂ ಸುಗಮವಾಗಿ ನಡೆದಿದ್ದು ಭಗವಂತನ ಪೂರ್ಣ ಅನುಗ್ರಹದಿಂದಲೇ ಎಂದು ಎಲ್ಲರಿಗೂ ಮನವರಿಕೆಯಾಯಿತು.

ಗಿರಿಜಾ ಕಲ್ಯಾಣದ ನಂತರ 50 ವರ್ಷ ದಾಂಪತ್ಯ ಜೀವನ ಪೂರೈಸಿದ ಸಮುದಾಯದ 10 ದಂಪತಿಗಳಿಗೆ ಗೌರವ ಸಮರ್ಪಣೆ ಮಾಡುವ ಕಾರ್ಯಕ್ರಮವು ಪ್ರಾರಂಭವಾಯಿತು. ಆಗಮಿಸಿದ್ದ ಈ ದಂಪತಿಗಳನ್ನು ಮಂಗಳ ವಾದ್ಯದೊಂದಿಗೆ ಮೆರವಣಿಗೆಯಲ್ಲಿ ಪನ್ನೀರು ಸಿಂಪಡಿಸಿ, ಪುಷ್ಪಮಾಲಾ ಸಮೇತ ಕರೆತರಲಾಯಿತು. ಹಿರಿಯ ದಂಪತಿಗಳು ಅವರಿಗಾಗಿ ಮೀಸಲಾಗಿದ್ದ ಆಸನಗಳನ್ನು ಅಲಂಕರಿಸಿದರು. ಸಂಘದ ಉಪಾಧ್ಯಕ್ಷರಾದ ಶ್ರೀ ಹೆಚ್.ಕೆ. ಶಶಿಧರ್‌ರವರು ದಂಪತಿಗಳ ವಿವರಗಳನ್ನು ಸಭೆಗೆ ತಿಳಿಸಿದರು. ದಂಪತಿಗಳಿಗೆ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರುಗಳು ಪತಿ–ಪತ್ನಿ ಸಮೇತರಾಗಿ ಅರಿಶಿನ, ಕುಂಕುಮ, ಶಾಲು, ಹಾರ, ಒಂದು ಜೊತೆ ದೀಪ, ಪೂಜೆಗೊಂಡ ನಂದಿ ವಿಗ್ರಹ, ದಂಪತಿಗಳ ಛಾಯಾಚಿತ್ರ ಮತ್ತು ವಿವಾಹದ ದಿನಾಂಕವಿರುವ, ಮನಸೆಳೆಯುವ ಸನ್ಮಾನಪತ್ರವನ್ನು ನೀಡಿ ಗೌರವಿಸಿ ನಮಸ್ಕರಿಸಿದರು. ಆ ಹಿರಿಯ ದಂಪತಿಗಳು ಸಂತೋಷದಿಂದ ಶುಭ ಹಾರೈಸಿದರು. ಹಿರಿಯ ದಂಪತಿಗಳ ಕುಟುಂಬ ಸದಸ್ಯರು ಈ ಸುಂದರ ಕ್ಷಣಗಳನ್ನು ಕಣ್ತುಂಬಿಕೊಂಡು ಅವರೊಂದಿಗೆ ಛಾಯಾಚಿತ್ರ ತೆಗೆಸಿಕೊಂಡು ಸಂಭ್ರಮಿಸಿದರು. ಮಂಗಳಮಯವಾದ ಈ ಕಲ್ಯಾಣದ ನಂತರ ಭಕ್ತಾದಿಗಳು ಆದಿ ದಂಪತಿಗಳಾದ ಶಿವ–ಶಕ್ತಿಯರಿಗೆ ಕಲ್ಯಾಣದ ಕಾಣಿಕೆಗಳನ್ನು ಸಲ್ಲಿಸುವ ಸೌಭಾಗ್ಯ ಪಡೆದರು. ಸಂಘದ ಲೆಕ್ಕ–ಪತ್ರ ಪರಿಶೋಧಕರಾದ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರಿಗೆ ಗೌರವಪೂರ್ವಕವಾಗಿ ಸಂಘದ ವತಿಯಿಂದ ಕೈಲಾಸ ಪರ್ವತದ ಚಿತ್ರವನ್ನು ನೀಡಲಾಯಿತು. ಗಿರಿಜಾ ಕಲ್ಯಾಣದ ಸಂಕಲ್ಪಕ್ಕೆ ಮತ್ತು ದಾನಿಗಳಿಗೆ ಪ್ರಸಾದ ರೂಪವಾಗಿ ಪೂಜೆಗೊಂಡ, ನಂದಿ ವಿಗ್ರಹ, ನೈವೇದ್ಯಗೊಂಡ ತೆಂಗಿನಕಾಯಿ ಮತ್ತು ಹಣ್ಣು, ಹೂಗಳನ್ನು ಒಂದು ಚೀಲದಲ್ಲಿಟ್ಟು ವಿತರಿಸಲಾಯಿತು. ಪ್ರಸಾದ, ಸುವರ್ಣ ಸಂಚಿಕೆ ಮತ್ತು ಕ್ಯಾಲೆಂಡರ್‌ಗಳ ವಿತರಣೆಯ ಕಾರ್ಯವನ್ನು ಸಮುದಾಯದ ಮಹಿಳಾ ಸ್ವಯಂ ಸೇವಿಕೆಯರು ಅಚ್ಚುಕಟ್ಟಾಗಿ ನೆರವೇರಿಸಿದರು. ಸಮುದಾಯದವರು ಪ್ರಸಾದ ಭೋಜನ ಸಮಯದಲ್ಲಿ ಸಂಯಮದಿಂದಿದ್ದು ಸುಮಾರು 485ಕ್ಕೂ ಮಿಗಿಲಾದ ಭಕ್ತರು ಪ್ರಸಾದವನ್ನು ಸ್ವೀಕರಿಸಿದರು. ಸಂಘದ ವತಿಯಿಂದ ಸಿಹಿ ಮತ್ತು ಖಾರಾ ಪೊಟ್ಟಣಗಳನ್ನು ಈ ಸಮಯದಲ್ಲಿ ವಿತರಿಸಿಲಾಯಿತು. ಈ ಇಡೀ ಕಾರ್ಯಕ್ರಮದ ಸುಂದರ ಕ್ಷಣಗಳನ್ನು ಕಣ್ಣಿಗೆ ಕಟ್ಟುವಂತೆ ಛಾಯಾಚಿತ್ರಗಳನ್ನು ಯಶಸ್ವಿಯಾಗಿ ಸೆರೆಹಿಡಿಯುವಲ್ಲಿ ಸಫಲರಾದ ಅನುಭವಿ ಛಾಯಾಚಿತ್ರಕಾರ ಹಾಗೂ ಅಂತಕರಿಕ ಲೆಕ್ಕ ಪರಿಶೋಧಕ ಶ್ರೀ ಶಿವಕುಮಾರ್ ನಟರಾಜ್ ಹಾಗೂ ಹಿರಿಯ ಸದಸ್ಯ ಶ್ರೀಯುತ ಕೆ.ಸಿ.ನಟರಾಜ್‌ರವರುಗಳಿಗೆ ಸಂಘವು ಆಭಾರಿಯಾಗಿದೆ.

ಶಿವಾರ್ಪಣಮಸ್ತು



**ಹೆಚ್.ಕೆ.ಶಶಿಧರ್**
**9845173766**

# ಮಾಗಡಿ ಮತ್ತು ಸಾವನದುರ್ಗಕ್ಕೆ ಒಂದ ದಿನದ ವಾರ್ಷಿಕ ಪ್ರವಾಸ



ಬೃಹಚ್ಚರಣ ಸಂಘವು ಸಮುದಾಯದವರಿಗೆ ಮತ್ತು ಹಿತೈಷಿಗಳಿಗಾಗಿ ದಿನಾಂಕ 26.1.2026, ಸೋಮವಾರದಂದು ಮಾಗಡಿಗೆ ಮತ್ತು ಸಾವನದುರ್ಗಕ್ಕೆ ಒಂದು ದಿನದ ವಾರ್ಷಿಕ ಪ್ರವಾಸವನ್ನು ಹಮ್ಮಿಕೊಂಡಿತ್ತು. ಎಲ್ಲಾ ವಯೋಮಾನದವರು ಪಾಲ್ಗೊಳ್ಳುವ ಈ ಪ್ರವಾಸವು ಸುಸೂತ್ರವಾಗಿ ನೆರವೇರಬೇಕೆಂಬ ಉದ್ದೇಶದಿಂದ ಕಾರ್ಯಕಾರಿ ಸಮಿತಿ ಸದಸ್ಯರು ಈ ಸ್ಥಳಗಳಿಗೆ ಮುಂಚಿತವಾಗಿ ಎರಡು ಬಾರಿ ಭೇಟಿ ನೀಡಿ ವ್ಯವಸ್ಥೆ ಮಾಡಿದ್ದರು.

ಬೆಳಿಗ್ಗೆ 130 ಮಂದಿಯೊಂದಿಗೆ (ಸದಸ್ಯರು, ಕುಟುಂಬವರ್ಗ, ಸ್ನೇಹಿತರು, ಹಿತೈಷಿಗಳು) 5 ಬಸ್ಸುಗಳಲ್ಲಿ 7.15ಕ್ಕೆ ಬಸವನಗುಡಿಯ ದ್ವಾರಕಾನಾಥ ಭವನ ಸಮೀಪದಿಂದ ಪ್ರವಾಸವು ಆರಂಭವಾಯಿತು. A, B, C, D, E ಎಂಬ ಫಲಕಗಳಿದ್ದ ಬಸ್ಸುಗಳಲ್ಲಿ ಪ್ರಯಾಣಿಕರಿಗೆ ಸ್ಥಳಾವಕಾಶ ಕಲ್ಪಿಸಲಾಗಿತ್ತು. ಕೆಲವರು ಅನುಕೂಲದಂತೆ ಮಾಗಡಿ ರಸ್ತೆ ಬಳಿ ಬಸ್ ಹತ್ತಿಕೊಂಡರು.

ಕಾರ್ಯಕಾರಿ ಸಮಿತಿ ಅಧ್ಯಕ್ಷರಾದ ಶ್ರೀ ಕೆ.ಎಸ್. ಅರುಣ್, ಉಪಾಧ್ಯಕ್ಷ ಶ್ರೀ ಹೆಚ್.ಕೆ. ಶಶಿಧರ್, ಕಾರ್ಯದರ್ಶಿ ಶ್ರೀ ಆರ್.ಎ. ಶ್ಯಾಮಸುಂದರ್ ಮತ್ತು ಖಜಾಂಚಿ ಶ್ರೀ ಎಸ್. ಸತ್ಯನಾರಾಯಣರವರು ಬಸ್ಸುಗಳಿಗೆ ರಾಹುಕಾಲದ ಮುಂಚೆಯೇ ಪೂಜೆ ಸಲ್ಲಿಸಿದರು. ಪ್ರವಾಸಿಗಳ ಜೈಕಾರದೊಂದಿಗೆ ಪ್ರವಾಸ ಪ್ರಾರಂಭವಾಯಿತು. ಪ್ರತೀ ಬಸ್ಸಿಗೂ ಹತ್ತಲು ಅನುಕೂಲವಾಗುವಂತೆ ಸ್ಟೂಲ್‌ಗಳನ್ನು ಏರ್ಪಾಟು ಮಾಡಲಾಗಿತ್ತು. ಪ್ರತೀ ಬಸ್ಸಿನಲ್ಲೂ ಕಾರ್ಯಕಾರಿ ಸಮಿತಿಯ ಕೆಲ ಸದಸ್ಯರು ಕಾರ್ಯನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡಿದ್ದರು. ಪ್ರತಿಯೊಬ್ಬ ಪ್ರವಾಸಿಗೂ ಒಂದು ಕೈಚೀಲ, ಕೈವಸ್ತ್ರ, ಕುರುಕುಲ ತಿಂಡಿ ಪ್ಯಾಕೆಟ್ (2 ಕೋಡುಬಳೆ, 1 ನಿಪ್ಪಟ್ಟು, 1 ಚಕ್ಕುಲಿ), ಎರಡು ಕಿತ್ತಲೆಹಣ್ಣು, ಎರಡು ಬಿಸ್ಕತ್ ಪ್ಯಾಕೆಟ್ ಮತ್ತು ಎರಡು ನೀರಿನ ಬಾಟಲ್‌ಗಳನ್ನು ಕೊಡಲಾಯಿತು. ಬಸ್ ಹೊರಡುತ್ತಿದ್ದಂತೆಯೇ ಎಲ್ಲರೂ ದೇವತಾಸ್ತುತಿ ಜೊತೆಗೆ ಮನರಂಜನಾತ್ಮಕ ಆಟ, ಹಾಡುಗಳೊಂದಿಗೆ ಪ್ರಯಾಣವನ್ನು ಸಂತೋಷ, ಆನಂದಗೊಳಿಸಿಕೊಂಡರು. ಎಲ್ಲಾ ಬಸ್ಸುಗಳೂ ಸಕಾಲದಲ್ಲಿ ಹೊರಟವು. ಸುಮಾರು 9.30ಕ್ಕೆ ತಾವರೆಕೆರೆಯ ಅತಿಥಿ ಗಾರ್ಡೆನಿಯಾ ಹೊಟೆಲ್‌ನಲ್ಲಿ ಎಲ್ಲರೂ ರುಚಿಕರವಾದ ಉಪಾಹಾರ ಕಾಂಬೋವನ್ನು (ಒಂದು ಇಡ್ಲಿ, ಒಂದು ವಡೆ, ಕೇಸರಿಬಾತು, ಖಾರಾಬಾತು, ಒಂದು ಮಸಾಲೆದೋಸೆ, ಕಾಫಿ/ಟೀ) ಸೇವಿಸಿದರು. ಉಪಾಹಾರ ತಟ್ಟೆಗಳನ್ನು ಎಲ್ಲರಿಗೂ ಕೊಡುವ ಸಮಯದಲ್ಲಿ ಪ್ರವಾಸಿಗಳು ತಾವೇ ಮುಂದಾಗಿ ಬಂದು ಸಹಾಯ ಹಸ್ತ ನೀಡಿದುದರಿಂದ ಈ ಕಾರ್ಯಕ್ರಮ ವ್ಯವಸ್ಥಿತವಾಗಿ, ಬೇಗನೇ ಪೂರ್ಣಗೊಳ್ಳಲು ಬಹಳ ಸಹಕಾರಿಯಾಯಿತು.

ಸುಮಾರು 11ಕ್ಕೆ ಮಾಗಡಿಯ ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೆ ತಲುಪಿದ ಪ್ರವಾಸಿಗಳು ಅಲ್ಲಿನ ಶ್ರೀರಂಗನಾಥಸ್ವಾಮಿ, ಶ್ರೀಸೀತಾಲಕ್ಷ್ಮಿ ಅಮ್ಮನವರು, ಬೆಳೆಯುತ್ತಿರುವ ಶಯನರೂಪಿ ಶ್ರೀರಂಗನಾಥಸ್ವಾಮಿ, ಅಲ್ಲದೇ ಶ್ರೀಆಂಜನೇಯ, ಶ್ರೀವೈನತೇಯ ದೇವರುಗಳ ದರ್ಶನ ಮಾಡಿ ಧನ್ಯರಾದರು. ಸಂಘದ ಪರವಾಗಿ ಎಲ್ಲರ ಕಲ್ಯಾಣಕ್ಕಾಗಿ ದೇವರಿಗೆ ಪಲ್ಲಕ್ಕಿ ಉತ್ಸವ ಸೇವೆ ಏರ್ಪಾಡಾಗಿತ್ತು. ಕೆಲವು ಪ್ರವಾಸಿಗಳು ಈ ಉತ್ಸವದಲ್ಲೂ ಪಾಲ್ಗೊಂಡರು. ಸಮುದಾಯದ, ಹಿತೈಷಿಗಳ ಒಳಿತಿಗಾಗಿ ಸಂಕಲ್ಪಿಸಿ ಭಗವಂತನಿಗೆ ಪೂಜೆ, ಅರ್ಚನೆ, ಮಂಗಳಾರತಿ ನೆರವೇರಿತು. ಅಷ್ಟು ಹೊತ್ತಿಗೆ ಸಮಯ ಒಂದು ಗಂಟೆಯಾಗಿತ್ತು. ದೇವಸ್ಥಾನದ ಹಿಂಬದಿಯಲ್ಲಿರುವ ಪುಟ್ಟ ಸ್ಥಳದಲ್ಲಿ ಅಚ್ಚುಕಟ್ಟಾದ, ಶುಚಿ–ರುಚಿಯಾದ ಭೋಜನ ಪ್ರಸಾದ ತಯಾರಾಗಿತ್ತು. ಎರಡು ಪಂಕ್ತಿಗಳಲ್ಲಿ ಭೋಜನ ಮುಗಿಯಿತು. ಎಲ್ಲರೂ ಅಲ್ಲಿನ ರುಚಿಕಟ್ಟಾದ ಭೋಜನವನ್ನು ಕೊಂಡಾಡಿದರು. ಸಂಘದ ಕಾರ್ಯಕಾರಿಸಮಿತಿಯ ಸದಸ್ಯ ಶ್ರೀಆರ್.ಎಸ್. ವೆಂಕಟೇಶ್ ಅವರು ಪ್ರಾಯೋಜಿಸಿದ್ದ ಸಿಹಿ ತಿನಿಸು ಒಬ್ಬಟ್ಟನ್ನು ಶ್ರೀಯುತರ ಅನುಪಸ್ಥಿತಿಯಲ್ಲಿ ಪುತ್ರಿ ಹಾಗೂ ಸಂಘದ ಸದಸ್ಯೆ ಶ್ರೀಮತಿ ಅಶ್ವಿನಿ ಮತ್ತು ಶ್ರೀ ಅಮೋಘ್ ದಂಪತಿಗಳು ಭೋಜನದ ಸಮಯದಲ್ಲಿ ಬಡಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಎಸ್.ಆರ್. ವಿಜಯಕುಮಾರ್ ಅವರ ಪತ್ನಿ ಶ್ರೀಮತಿ ಲತಾರವರ ಹುಟ್ಟಿದ ದಿನದ ಸಲುವಾಗಿ ದಂಪತಿಗಳು ಬಾದಾಮಿ ಹಲ್ವ, ಚೌಚೌವನ್ನು ವಿತರಿಸಿದರು.

ಭೋಜನ ನಂತರ ಕೆಲ ಸಮಯ ವಿಶ್ರಮಿಸಿದ ಬಳಿಕ ಪ್ರವಾಸ ಮಾಗಡಿಯಲ್ಲೇ ಇರುವ ಶ್ರೀ ಸೋಮೇಶ್ವರಸ್ವಾಮಿ ದೇವಸ್ಥಾನಕ್ಕೆ ಮುಂದುವರೆಯಿತು. ಅಲ್ಲಿ ಸ್ಥಳೀಯ ಅರ್ಚಕರು ಮಾಗಡಿ ಕೆಂಪೇಗೌಡರಿಂದ ನಿರ್ಮಿತವಾದ ಪುರಾತನ ವಾಸ್ತುಶಿಲ್ಪದ ದೇವಸ್ಥಾನದ ಕಥೆ ಹೇಳಿದರು. ಕೆಂಪೇಗೌಡರ ತಾಯಿ ತಮ್ಮ ಇಳಿ ವಯಸ್ಸಿನಲ್ಲಿ ಕಾಶಿ ವಿಶ್ವೇಶ್ವರನ ದರ್ಶನ

ಮಾಡುವ ಬಯಕೆ ಹೊಂದಿದ್ದರು. ಆದರೆ ಅಲ್ಲಿಗೆ ಹೋಗಲಾಗದ ಪರಿಸ್ಥಿತಿಯಲ್ಲಿ ತಾಯಿಗಾಗಿ ಮಾಗಡಿಯಲ್ಲೇ ಶ್ರೀ ಸೋಮೇಶ್ವರಸ್ವಾಮಿಯ ದೇವಾಲಯವನ್ನು ಕೆಂಪೇಗೌಡರು ನಿರ್ಮಿಸಿದರು. ಅಲ್ಲೇ ಶ್ರೀ ಭ್ರಮರಾಂಬಾ ಸ್ವರೂಪದಲ್ಲಿರುವ ದೇವಿಯೂ, ಮೇರುಚಕ್ರ, ಶ್ರೀ ಸತ್ಯನಾರಾಯಣ ಸ್ವಾಮಿಯೂ ನೆಲೆಸಿದ್ದಾರೆ. ಎಲ್ಲಾ ದೇವರುಗಳನ್ನು ವಿಶೇಷವಾಗಿ ಅಲಂಕರಿಸಿದ್ದರು. ದೇವತಾಮೂರ್ತಿಗಳನ್ನು ದರ್ಶಿಸಲು ಎರಡು ಕಣ್ಣು ಸಾಲದೆಂದೆನಿಸುತ್ತಿತ್ತು. ಬಂದ ಪ್ರವಾಸಿಗಳಿಗೆ ರಸಾಯನ ಮತ್ತು ಕಡಲೆ ಉಸಲಿಯನ್ನು ಪ್ರಸಾದವಾಗಿ ನೀಡಿದರು. ಸಂಘದ ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಛಾಯಾಗ್ರಹಕರಾದ ಶ್ರೀ ಶಿವಕುಮಾರ್ ನಟರಾಜನ್‌ರವರು ಪ್ರವಾಸದ ಎಲ್ಲಾ ಸದಸ್ಯರನ್ನು ಅಲ್ಲೇ ಒಟ್ಟಾಗಿಸಿ ಪ್ರವಾಸದ ಸವಿ ನೆನಪಿಗಾಗಿ ತಮ್ಮ ಕ್ಯಾಮರಾದಲ್ಲಿ ಸೆರೆಹಿಡಿದರು.

ಅಲ್ಲಿಂದ ಮುಂದೆ ನಮ್ಮ ಪ್ರವಾಸ ಸಾವನದುರ್ಗದತ್ತ ಸಾಗಿತು. ಅಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಮತ್ತು ಅಮ್ಮನವರ ದರ್ಶನ ಲಭ್ಯವಾಯಿತು. ಇಬ್ಬರೂ ಅಲ್ಲಿ ಉದ್ಭವರೂಪಿಯಾಗಿ ಪೂಜಿಸಲ್ಪಡುತ್ತಿದ್ದಾರೆ. ಪ್ರವಾಸಿಗಳು ಭಕ್ತಿಯಿಂದ ದರ್ಶನ ಮಾಡಿಕೊಂಡರು. ಅದಾಗಲೇ ಸಮಯ ಸಂಜೆ 5.30 ಆಗಿತ್ತು.

ಅಲ್ಲಿಂದ ರಾಮನಗರ ಮಾರ್ಗವಾಗಿ ಬೆಂಗಳೂರಿನತ್ತ ಪ್ರಯಾಣ ಮಾಡುವ ಯೋಜನೆ ಇತ್ತು. ಮಾರ್ಗ ಮಧ್ಯದಲ್ಲಿ "ಕಾಮತ್ ಲೋಕರುಚಿ"ಯಲ್ಲಿ ಕಾಫಿ/ಟೀ ಮತ್ತು ರಾತ್ರಿ ಭೋಜನಕ್ಕಾಗಿ ಒಗ್ಗರಣೆ ಅವಲಕ್ಕಿ ಮತ್ತು ಮೊಸರನ್ನವನ್ನು ಬುತ್ತಿಯಾಗಿ ಪ್ರತಿಯೊಬ್ಬರಿಗೂ ವಿತರಿಸಲಾಯಿತು. ಇದೇ ಪ್ರವಾಸದ ಕೊನೆಯ ಹಂತ. ಎಲ್ಲರೂ ತಮ್ಮ ತಮ್ಮೊಳಗೆ ಪ್ರವಾಸದ ಬಗ್ಗೆ ಸಂತೋಷ ವ್ಯಕ್ತಪಡಿಸಿ, ಕಾರ್ಯಕಾರಿ ಸಮಿತಿ ಸದಸ್ಯರ ಯೋಜನೆಗಳನ್ನು ಶ್ಲಾಘಿಸಿದರು. ಬೆಂಗಳೂರಿಗೆ ಬರುತ್ತಾ ಪ್ರವಾಸಿಗಳಿಗೆ ಅನುಕೂಲವಾಗುವ ಕೆಲವು ಸ್ಥಳಗಳಲ್ಲಿ ಇಳಿಯಲು ಅವಕಾಶ ಮಾಡಿಕೊಡಲಾಯಿತು. ಕಡೆಯಲ್ಲಿ ದ್ವಾರಕಾನಾಥ ಭವನದ ಬಳಿ ಬರುವ ಹೊತ್ತಿಗೆ ರಾತ್ರಿ 10 ಗಂಟೆಯಾಗಿತ್ತು. ಎಲ್ಲರೂ ಸೌಖ್ಯವಾಗಿ ಮನೆ ಸೇರಿಕೊಂಡು ತಮಗಾದ ಸಿಹಿ ಅನುಭವಗಳನ್ನು ವಾಟ್ಸಾಪ್‌ನಲ್ಲಿ ಹಂಚಿಕೊಂಡರು. ಪ್ರವಾಸಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.



**ಹೆಚ್.ಆರ್. ಲಲಿತಾ**
**9945199637**

## ವಧು–ವರ ಸಂಪದ

**ವಧು ಬೇಕಾಗಿದ್ದಾರೆ**

**ವರನ ವಿವರ**

| | |
|---|---|
| ಹೆಸರು | :ಸುಪ್ರಿತ್ ಹೆಚ್ ವಿ |
| ತಂದೆಯ ಹೆಸರು | : ವೆಂಕಟರಾಮ ಶಾಸ್ತ್ರಿ |
| ತಾಯಿಯ ಹೆಸರು | : ಚಂಪಕ ಟಿ ಎನ್ |
| ಗೋತ್ರ | : ಶ್ರೀವತ್ಸ |
| ರಾಶಿ | : ಧನಸ್ಸು |
| ನಕ್ಷತ್ರ | : ಪೂರ್ವಾಷಾಢ |
| ಜನ್ಮ ದಿನಾಂಕ | : 21 ಏಪ್ರಿಲ್ 1995 |
| ಜನ್ಮ ಸಮಯ | : ಬೆಳಗ್ಗೆ 3.30 |
| ಜನ್ಮ ಸ್ಥಳ | : ಬೆಂಗಳೂರು |
| ಎತ್ತರ | : 5' – 7" |
| ವಿದ್ಯಾರ್ಹತೆ | : ಫೈನ್ ಆರ್ಟ್ಸ್‌ನಲ್ಲಿ ಬ್ಯಾಚಲರ್ ಪದವಿ ಮತ್ತು ಅನಿಮೇಶನ್ ಕ್ಷೇತ್ರದಲ್ಲಿ ಡಿಪ್ಲೋಮಾ |
| ಉದ್ಯೋಗ ವಿವರ | : ಗ್ರಾಫಿಕ್ ಡಿಸೈನರ್ |
| ಮೊಬೈಲ್ ಸಂಖ್ಯೆ | : 9880761691 |





**ಸಂಘದ ಮುಂದಿನ ಕಾರ್ಯಕ್ರಮ ವೈಶಾಖ ಶಕ್ಲ ಪಂಚಮಿ (21–04–2026ನೇ ಮಂಗಳವಾರ)ಯಂದು ಶಂಕರ ಭಗವತ್ಪಾದರ ಜಯಂತಿ. ವಿವರಗಳನ್ನು ಮುಂದೆ ತಿಳಿಸಲಾಗುವುದು.**

# ಕಿತ್ತಿಗಾನಹಳ್ಳಿಯಲ್ಲಿ ನಾಗಾರಾಧನೆ – 2026



ಬೃಹಚ್ಚರಣ ಸಂಘವು ದಿನಾಂಕ 21.2.2026, ಶನಿವಾರದಂದು ಆನೇಕಲ್ ತಾಲ್ಲೂಕಿನ ಶ್ರೀನಾಗೇಶ್ವರ ಕ್ಷೇತ್ರವಾದ ಕಿತ್ತಿಗಾನಹಳ್ಳಿಯಲ್ಲಿ ಪ್ರತೀ ವರ್ಷದಂತೆ ನಾಗಾರಾಧನೆ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸಮುದಾಯದ ಹಲವು ಕುಟುಂಬಗಳು ಫಾಲ್ಗುಣ ಶುದ್ಧ ಪಂಚಮಿಯಾದ ಅಂದು ಸಾಂಪ್ರದಾಯಿಕ ಉಡುಗೆಗಳನ್ನುಟ್ಟು ಕ್ಷೇತ್ರದ ಅಶ್ವತ್ಥ ವೃಕ್ಷದ ಕಟ್ಟೆಯಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ನಾಗಶಿಲೆಗಳಿಗೆ ಭಕ್ತಿ ಶ್ರದ್ಧೆಗಳಿಂದ ಹಾಲು, ನೀರು ತನಿ ಎರೆದು ಪಕ್ಕದಲ್ಲೇ ಇರುವ ಹಾವಿನ ಹುತ್ತವನ್ನೂ ಪೂಜಿಸಿದರು. ಬೆಳಿಗ್ಗೆ 8 ಗಂಟೆಗೆ ಭಕ್ತಾದಿಗಳು ಬಂದು ಪೂಜಿಸಿ, ನಂತರ ಶ್ರೀ ಸುಬ್ರಹ್ಮಣ್ಯ ಸ್ವರೂಪಿ ಬ್ರಹ್ಮಚಾರಿಗಳಿಗೆ ಪಾದಪೂಜೆ ಸಲ್ಲಿಸಿ, ವಸ್ತ್ರ, ದಕ್ಷಿಣೆ ಸಹಿತ ತಾಂಬೂಲ ನೀಡಿ ನಮಸ್ಕರಿಸಿ ಧನ್ಯರಾದರು.

ಶ್ರೀಕ್ಷೇತ್ರದ ದೇವರುಗಳಾದ ಭೂ–ನೀಳಾ ಸಮೇತ ಶ್ರೀಶ್ರೀನಿವಾಸ, ಶ್ರೀವಳ್ಳಿ–ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿ, ಶ್ರೀಗಣಪತಿ, ಶ್ರೀಗಾಯತ್ರಿದೇವಿ ಸನ್ನಿಧಾನಗಳು ವಿಶೇಷ ಅಲಂಕಾರಗಳು, ಪಂಚಾಮೃತ ಅಭಿಷೇಕ, ಷೋಡಶೋಪಚಾರ ಪೂಜೆಗಳ ನಂತರ ದಿವ್ಯಸೌಂದರ್ಯದಿಂದ ಕಂಗೊಳಿಸುತ್ತಿದ್ದವು.

ಸುಮಾರು 11 ಗಂಟೆಗೆ ವಸ್ತ್ರ, ವಿವಿಧ ಹೂವುಗಳು ಸರ್ವಾಭರಣಗಳಿಂದ ಅಲಂಕೃತಗೊಂಡ ಶ್ರೀವಳ್ಳಿ–ದೇವಸೇನಾ ಸಮೇತ ಶ್ರೀಸುಬ್ರಹ್ಮಣ್ಯಸ್ವಾಮಿಯ ಉತ್ಸವಮೂರ್ತಿಯನ್ನು ರಥದಲ್ಲಿರಿಸಿ, ವಾದ್ಯ ಮೇಳಗಳೊಂದಿಗೆ ಬೃಹಚ್ಚರಣ ಸಮುದಾಯದವರು ಸಂಭ್ರಮದಿಂದ ಮೆರವಣಿಗೆಯಲ್ಲಿ ರಥವನ್ನು ತಂದು ಅಶ್ವತ್ಥ ಕಟ್ಟೆಯ ಬಳಿ ನಿಲ್ಲಿಸಿದರು.

ಪುರೋಹಿತರಾದ ಶ್ರೀ ಪ್ರಕಾಶ್ ಭಟ್ ನಾಗಾರಾಧನೆಯ ಅನ್ನಸಂತರ್ಪಣೆಗಾಗಿ ದೇಣಿಗೆ ನೀಡಿದವರ ಹೆಸರುಗಳ ಸುದೀರ್ಘ ಪಟ್ಟಿಯನ್ನು ಓದಿ ಸಂಕಲ್ಪವನ್ನು ನೆರವೇರಿಸಿದರು. ನಂತರ ಪೂಜೆ, ನೈವೇದ್ಯ ಮತ್ತು ಮಹಾಮಂಗಳಾರತಿ ನೆರವೇರಿತು.

ಪ್ರತಿ ವರ್ಷದಂತೆ ಈ ವರ್ಷವೂ ರಾಜಾಪುರ ಕೃಷ್ಣಮೂರ್ತಿ ಕುಟುಂಬದವರು ಪಾನಕ, ಕೋಸಂಬರಿ ವಿತರಿಸುವ ಕಾರ್ಯವನ್ನು ಸ್ವಯಂಪ್ರೇರಿತರಾಗಿ ಅಷ್ಟೇ ಶ್ರದ್ಧಾ ಭಕ್ತಿಗಳಿಂದ ನೆರವೇರಿಸಿದರು. ಪೂರ್ವದಲ್ಲಿ ಅನುಕೂಲಗಳು ಬಹಳಷ್ಟು ಕಡಿಮೆ ಇದ್ದ ಕಾಲದಲ್ಲೇ ಬೃಹಚ್ಚರಣ ಪಂಗಡದ ದಿವಂಗತ ಆರ್. ರಾಮಚಂದ್ರನ್ ಕುಟುಂಬದವರು ಎಷ್ಟೇ ಶ್ರಮವಾದರೂ ಲೆಕ್ಕಿಸದೇ ಮನೆಯಿಂದ ಹುಳಿಯವಲಕ್ಕಿ ಪ್ರಸಾದವನ್ನು ತಯಾರಿಕೊಂಡು ಬಂಡಿ ಕಟ್ಟಿಕೊಂಡು ಕ್ಷೇತ್ರಕ್ಕೆ ತಂದು ಆರಾಧನೆಯ ನಂತರ ಅದನ್ನು ಪ್ರಸಾದ ರೂಪವಾಗಿ ಭಕ್ತಾದಿಗಳಿಗೆ ವಿತರಿಸುತ್ತಿದ್ದರಂತೆ. ಈ ವಿಷಯವನ್ನು ನಮ್ಮೊಂದಿಗೆ ಹಂಚಿಕೊಂಡು ಇಲ್ಲಿ ದಾಖಲಿಸಲು ಅನುವು ಮಾಡಿಕೊಟ್ಟ ಸದಸ್ಯರಿಗೆ ವಂದನಾಪೂರ್ವಕ ಧನ್ಯವಾದಗಳು. ಪ್ರಸ್ತುತ ಶ್ರೀಯುತರ ಸಹೋದರ ದಿವಂಗತ ಆರ್. ಗೋಪಾಲರಾವ್ ಕುಟುಂಬದವರು ಸತತವಾಗಿ ಈ ಕಾರ್ಯವನ್ನು ಈ ವರ್ಷವೂ ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ಬೆಳಿಗ್ಗೆ ತನಿಹಾಕಿದ ನಂತರ ಭಕ್ತಾದಿಗಳಿಗೆ ಉಪಾಹಾರ ಏರ್ಪಾಡಾಗಿತ್ತು. ಮಧ್ಯಾಹ್ನ ಒಂದು ಗಂಟೆಗೆ ಪ್ರಸಾದ ಭೋಜನ ಪ್ರಾರಂಭವಾಯಿತು. ಈ ಬಾರಿ ಸುಮಾರು 650ಕ್ಕೂ ಹೆಚ್ಚು ಮಂದಿ ಭೋಜನ ಸ್ವೀಕರಿಸಿದರು. ಇಲ್ಲಿ ಯಾವುದೆ ಜಾತಿ ಭೇದ ಕಾಣುತ್ತಿರಲಿಲ್ಲ.

ಸದಸ್ಯರಾದ ಶ್ರೀ ಎಲ್. ಶ್ರೀನಾಥ್‌ರವರು ಈ ವರ್ಷವೂ ಕೂಡ ಅವರು ಸೇವಾಮನೋಭಾವದಿಂದ ನೀರನ್ನು ಪ್ರಾಯೋಜಿಸಿದರು. ಕಾರ್ಯಕಾರಿ ಸಮಿತಿ ಹಿರಿಯ ಸದಸ್ಯ ಹಾಗೂ ಪೋಷಕ ಶ್ರೀ ಸೋಮಸುಂದರರವರು ಎಂದಿನಂತೆ ವಡೆ ಪ್ರಸಾದವನ್ನು ಪ್ರಾಯೋಜಿಸಿದರು. ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯರಾದ ಶ್ರೀ ಕೆ.ಎಸ್.

ಅಶ್ವತ್ಥನಾರಾಯಣರಾವ್‌ರವರ ಪತ್ನಿ ದಿವಂಗತ ಆರ್.ಕೆ. ನಾಗಲಕ್ಷ್ಮಮ್ಮರವರ 80 ವರ್ಷ ಹುಟ್ಟಿದ ದಿನದ ಸ್ಮರಣೆಗಾಗಿ ಎರಡು ಒಬ್ಬಟ್ಟು ಇರುವ ಪ್ಯಾಕೆಟ್‌ಗಳನ್ನು ಅವರ ಕುಟುಂಬದವರು ವಿತರಿಸಿದರು.

ಆ ದಿನ ನಾಗಾರಾಧನೆ ಆದ್ದರಿಂದ ಊಟಕ್ಕೆ ವಡೆ, ಪಾಯಸ ಬಡಿಸಿ, ಎರಡೆರಡು ವಡೆ ಪ್ರಸಾದ ಇರುವ ಪ್ಯಾಕೆಟ್‌ಗಳನ್ನು ನೀಡಲಾಯಿತು. ಸಮಿತಿಯ ನಿರೀಕ್ಷೆಗಿಂತ ಹೆಚ್ಚು ಭಕ್ತಾದಿಗಳು ಭೋಜನ ಸ್ವೀಕರಿಸಿದ್ದರಿಂದ ಸಮುದಾಯದ ಕೆಲವರಿಗೆ ವಡೆ ಪ್ರಸಾದವು ದೊರಕಲು ಅಸಾಧ್ಯವಾಯಿತು. ಇದಕ್ಕಾಗಿ ಸಮಿತಿಯು ಕ್ಷಮೆ ಕೋರುತ್ತದೆ. ಆಹಾರ ಪದಾರ್ಥವನ್ನು ಶುಚಿ-ರುಚಿಯಾಗಿ ತಯಾರಿಸಿ ಅಚ್ಚುಕಟ್ಟಾಗಿ ಬಡಿಸಿದ ಎಲ್ಲಾ ಪಾಕಪ್ರವೀಣರಿಗೆ ಪ್ರತೀ ವರ್ಷದಂತೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಸ್ವಇಚ್ಛೆಯಿಂದ ಪಂಚೆ ಮತ್ತು ಶಲ್ಯಗಳನ್ನು ಪ್ರಾಯೋಜಿಸಿದರು. ಇವರೊಂದಿಗೆ ಸದಸ್ಯ ಶ್ರೀ ಪದ್ಮನಾಭನ್ ಅವರೂ ತಮ್ಮ ಸಹಾಯ ಹಸ್ತ ಚಾಚಿದ್ದು ಶ್ಲಾಘನೀಯವಾದದ್ದು. ಸಂಘದ ಕೆಲವು ಹಿರಿಯ ಸದಸ್ಯರು ಮತ್ತು ಸಮುದಾಯದವರು ಭೋಜನವು ತುಂಬಾ ರುಚಿಯಾಗಿತ್ತು ಎಂದು ಪ್ರಶಂಸಿಸುತ್ತಿದ್ದರು.

ಶ್ರೀ ಪರಾಭವ ಸಂವತ್ಸರದ ಪಂಚಾಂಗವನ್ನು ಸಮುದಾಯದವರಿಗಾಗಿ ರಿಯಾಯಿತಿ ದರದಲ್ಲಿ ನೀಡಲಾಯಿತು. ಸಂಘವು 150 ಪಂಚಾಂಗಗಳನ್ನು ತಂದಿದ್ದು ಈ ಬಾರಿ ಬೇಡಿಕೆ ಹೆಚ್ಚಾಗಿ ಮುಂದಿನ ವರ್ಷ ಇನ್ನೂ ಹೆಚ್ಚು ಪಂಚಾಂಗ ತರುವ ಯೋಜನೆ ಹಾಕಿಕೊಂಡಿತು.

ನಾಗಾರಾಧನೆಯು ಯಾವುದೇ ಅಡೆತಡೆ ಇಲ್ಲದೆ ಸುಸೂತ್ರವಾಗಿ ನಡೆಯಲು ಭಗವಂತನ ಅನುಗ್ರಹದೊಂದಿಗೆ ಕಿತ್ತಿಗಾನಹಳ್ಳಿಯ ನಿವಾಸಿ ಸಂಘದ ಖಜಾಂಚಿಗಳಾದ ಶ್ರೀ ಎಸ್. ಸತ್ಯನಾರಾಯಣರವರು ಮತ್ತು ಸ್ಥಳೀಯರು ಎಂದಿನಂತೆ ಅತ್ಯಂತ ಆಸ್ಥೆಯಿಂದ ಸಂಪೂರ್ಣ ಜವಾಬ್ದಾರಿ ಹೊತ್ತು ಆಸಕ್ತಿಯಿಂದ ಕಾರ್ಯ ನಿರ್ವಹಿಸಿದರು. ಭೋಜನ ವೇಳೆಯಲ್ಲಿ ಸಮುದಾಯದವರು ಸ್ವಯಂಪ್ರೇರಿತರಾಗಿ ಬಾಣಸಿಗರೊಂದಿಗೆ ಬಡಿಸುವ ಸೌಜನ್ಯ ತೋರಿಸಿದರು. ವಡೆ ಪ್ರಸಾದವನ್ನು ಸಮಯಕ್ಕೆ ಸರಿಯಾಗಿ ವಿತರಿಸಲು ಅಚ್ಚುಕಟ್ಟಾಗಿ ಕವರಿಗೆ ಹಾಕಿ ಸಹಕರಿಸಿದವರು ಸಮುದಾಯದ ಭಗಿನಿಯರು.

ಅನೇಕ ದಾನಿಗಳು ಉದಾರ ಧನ ಸಹಾಯ ಮಾಡುತ್ತಿರುವುದರಿಂದ ಈ ಅನ್ನ ಸಂತರ್ಪಣೆ ಕಾರ್ಯಕ್ರಮ ನಿರ್ವಿಘ್ನವಾಗಿ ನೆರವೇರುತ್ತಿದೆ. ಇದೇ ಸಂದರ್ಭದಲ್ಲಿ ದಾನಿಗಳಿಗೆ ಮತ್ತು ಪ್ರಾಯೋಜಕರಿಗೆ ಧನ್ಯವಾದಗಳು. ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಇತರ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಧನ್ಯವಾದಗಳು. ಇದಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಸಕಲರಿಗೂ ಸಂಘವು ಚಿರಋಣಿಯಾಗಿರುತ್ತದೆ. ಕ್ಷೇತ್ರ ದೇವಾಲಯದ ಅರ್ಚಕರಾದ ಶ್ರೀ ಸೂರ್ಯನಾರಾಯಣ ದೀಕ್ಷಿತರು ಹಾಗೂ ಅವರ ತಂಡದವರಿಗೆ ಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿರುವ ದೇವತಾ ಕಾರ್ಯಕ್ರಮಕ್ಕೆ ಸಮುದಾಯದ ಪರವಾಗಿ ವಂದನೆಗಳನ್ನು ಅರ್ಪಿಸಲಾಗುತ್ತಿದೆ.

ವಿಶೇಷವಾಗಿ ಈ ಬಾರಿ ಗಮನಕ್ಕೆ ಬಂದಿದ್ದು:- ಪೂಜಾ ಸಮಯದಲ್ಲಿ ವಾದ್ಯ ಮೇಳವನ್ನು ಏರ್ಪಡಿಸುವ ಸಂಪ್ರದಾಯವಿದೆ. ಓಲಗ, ಡೋಲು ನುಡಿಸುವ ಕಲಾವಿದರೊಂದಿಗೆ, ಕಲಿಯುತ್ತಿರುವ ಕಿರಿ ಕಲಾವಿದರು ಬಂದಿದ್ದು ಬಿಡುವಿನ ವೇಳೆಯಲ್ಲಿ ಓಲಗ ತೆಗೆದುಕೊಂಡು ಸಂಗೀತದ ಪ್ರಾರಂಭ ಪಾಠಗಳನ್ನು ಅಭ್ಯಾಸ ಮಾಡುತ್ತಿದ್ದರು. ಮುಂದಿನ ಪೀಳಿಗೆಯವರು ಈ ಕಲೆಯನ್ನು ಆಸಕ್ತಿಯಿಂದ ಅಭ್ಯಾಸ ಮಾಡುತ್ತಿದ್ದುದನ್ನು ಆಲಿಸಲು ಸೊಗಸಾಗಿದ್ದಿತು. ಇದನ್ನು ಎಷ್ಟು ಜನ ಗಮನಿಸುತ್ತಿದ್ದಾರೆ ಎಂಬ ಚಿಂತೆಯೂ ಅವರಿಗಿರಲಿಲ್ಲ. ಅವಕಾಶ ಸಿಕ್ಕಾಗ ಅಭ್ಯಾಸ ಮಾಡಬೇಕೆಂಬುದು ಅವರ ಉದ್ದೇಶವಾಗಿತ್ತು ಎಂದು ತೋರುತ್ತದೆ. ಈ ನಡುವೆ ಹಿನ್ನಲೆಯಲ್ಲಿ ಲಾಲಿತ್ಯದಿಂದ ಕೂಡಿದ ವೇದ ಮಂತ್ರಗಳು ಧ್ವನಿವರ್ಧಕದಲ್ಲಿ ಕೇಳಿಬರುತ್ತಲೇ ಇದ್ದಿತು. ಇದು ಅಲ್ಲಿನ ವಾತಾವರಣವನ್ನು ಧನಾತ್ಮಕವಾಗಿಸುವಲ್ಲಿ ಸಹಕರಿಸುತ್ತಿತ್ತು.

ಇಂತಹ ಕಾರ್ಯಕ್ರಮಗಳಲ್ಲಿ ಸಮುದಾಯದವರು ಧಾರ್ಮಿಕ ವಿಧಿಗಳಲ್ಲಿ ಭಾಗವಹಿಸುವುದು, ಬಂಧು-ಮಿತ್ರರ ಭೇಟಿ ಉಭಯಕುಶೋಲಪರಿ, ಸಲ್ಲಾಪ, ತಿಳಿಹಾಸ್ಯಗಳ ವಿನಿಮಯ ಇವುಗಳು ಜೀವನೋತ್ಸಾಹವು ಮರುಕಳಿಸಲು, ಮುಂದುವರೆಯಲು ಒಂದು ಸದಾವಕಾಶ.



**ಆರ್. ರಮೇಶ್**
**9886034048**

## ಉಪನಿಷತ್ತಿನ ಮಹತ್ವ

ವೇದಗಳು ಅನೇಕ ಭಾಗಗಳನ್ನು ಹೊಂದಿವೆ. ಆ ಭಾಗಗಳಲ್ಲಿ ಕರ್ಮಕಾಂಡವನ್ನು ಉಲ್ಲೇಖಿಸಿದೆ. ಅವುಗಳು ಯಾಗ, ಯಜ್ಞಗಳನ್ನು ಹೇಗೆ ನೆರವೇರಿಸಬೇಕೆಂದು ತಿಳಿಸುತ್ತವೆ. ಪ್ರತಿಯೊಂದು ಯಾಗಗಳನ್ನು ನೆರವೇರಿಸುವಾಗಲೂ, ಯಾವ ಯಾವ ಮಂತ್ರಗಳನ್ನು ಪಠಿಸಬೇಕೆಂದು ವಿವರಿಸಿದೆ. ಯಜ್ಞ ಯಾಗಾದಿಗಳು ಒಂದು ವಿಶೇಷ ಪ್ರಕಾರದ ಉದ್ದೇಶವನ್ನು ಹೊಂದಿವೆ. ಸ್ವರ್ಗ ಲೋಕವನ್ನು ಬಯಸುವವರು ಜ್ಯೋತಿಷ್ಟೋಮ ಯಾಗವನ್ನು ನಡೆಸಬೇಕು. ಒಬ್ಬ ಮನುಷ್ಯ ಸಂಪತ್ತನ್ನು ಅಪೇಕ್ಷೆ ಪಟ್ಟರೆ ಅವನು ವಾಯವ್ಯ ಯಾಗವನ್ನು ಆಚರಿಸಬೇಕು. ಉಪನಿಷತ್ತುಗಳು ಬ್ರಹ್ಮ ಕಾಂಡವನ್ನು ನಿರೂಪಿಸಿವೆ (ಪ್ರತಿಪಾದಿಸಿವೆ). ನಾವು ವೇದಾಂತ ಎಂಬುದು ಉಪನಿಷತ್ತುಗಳನ್ನು ನಿರ್ದೇಶಿಸುತ್ತದೆ. ಎಂದು ಎಂ.ಎ. ವೆಂಕಟಕೃಷ್ಣ ಅವರು ತಮ್ಮ ಉಪನ್ಯಾಸದಲ್ಲಿ ವಿವರಿಸಿದ್ದಾರೆ. ":ಅಂತ" ಎಂದರೆ ಕೊನೆ, ಉಪನಿಷತ್ತುಗಳು ವೇದದ ಅಂತ್ಯದ ಕಡೆಗೆ ಹತ್ತಿರ ಇರುವುದರಿಂದ ಅದನ್ನು ವೇದಾಂತ ಎಂದು ಕರೆಯಲ್ಪಡುತ್ತದೆ.

ವೇದವ್ಯಾಸ ಮುನಿಗಳು ಬ್ರಹ್ಮಸೂತ್ರವನ್ನು ಬರೆದರು ಅವುಗಳು ಉಪನಿಷತ್ತಿನ ಸಿದ್ಧಾಂತ ಮತ್ತು ಧರ್ಮ ಸತ್ವಗಳನ್ನು ವಿಶದೀಕರಿಸಿವೆ. ತತ್ವಜ್ಞಾನದ ವಿವಿಧ ವಿದ್ಯಾಶಾಲೆಗಳ ಮೂಲಕ ಬ್ರಹ್ಮಸೂತ್ರವು ವ್ಯಾಖ್ಯಾನ ವಿವರಣೆ ನೀಡಿದೆ. (ಭಾಷ್ಯ ಬರೆದಿದೆ). ಶ್ರೀ ರಾಮಾನುಜಾಚಾರ್ಯರ ವ್ಯಾಖ್ಯಾನ ವಿವರಣೆಯನ್ನು "ಶ್ರೀ ಭಾಷ್ಯಮ್" ಎಂದು ಕರೆದಿದ್ದಾರೆ.

"ಪ್ರಸನ್ನ" ಅಥವಾ "ಶರಣಾಗತಿ"ಗೋಸ್ಕರವೇ ಮುಖ್ಯವಾದ ಬ್ರಹ್ಮಕಾಂಡವೆ ಇದೆ. ಶ್ರೀ ರಾಮಾನುಜಾಚಾರ್ಯರು ಶ್ರೀ ವೈಕುಂಠವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಭೌತಿಕ ಅಥವಾ ಪ್ರಾಪಂಚಿಕ ಲಾಭಗಳನ್ನು ಪಡೆಯುವಂತೆ ನಿರ್ದೇಶಿಸಿದ ಯಾವ ಯಜ್ಞ ಯಾಗಾದಿಗಳನ್ನು ನೆರವೇರಿಸಲು ಉತ್ಸುಕರಾಗಲಿಲ್ಲ ಅಲ್ಪಕಾಲಿಕವಾಗಿ ಇರುವಂತ ಸ್ವರ್ಗವಾಸವನ್ನೂ ಅವರ ಮನಸ್ಸು ಬಯಸಲಿಲ್ಲ. ಯಾವುದೇ ಆದ ಹಿತಾಸಕ್ತಿಗೂ ಅವರು ಮನಸೋಲಲಿಲ್ಲ. ಆದುದರಿಂದ ಅವರು ಜ್ಯೋತಿಷ್ಟೋಮ ಯಾಗವನ್ನು ಮಾಡಲಿಲ್ಲ. ಐಶ್ವರ್ಯ ಅಥವಾ ಹಣದ ಬೆನ್ನಟ್ಟಿ ಹೋಗಲು ಇಷ್ಟಪಡದೇ ಇರುವುದರಿಂದ ವಾಯುವ್ಯ ಯಾಗವನ್ನು ನೆರವೇರಿಸಲಿಲ್ಲ. ಆದರೆ ಐಶ್ವರ್ಯವನ್ನು ಲಕ್ಷ್ಯಪೂರ್ವಕವಾಗಿ ದೂರವಿಡಲಿಲ್ಲ (ವರ್ಜಿಸಲಿಲ್ಲ). ಅವರು ಜೀವನವನ್ನು ಸುಸೂತ್ರವಾಗಿ ನಡೆಸಲು ಎಷ್ಟು ಅವಶ್ಯಕತೆ ಬೇಕೋ ಅಷ್ಟನ್ನು ಸಂಪಾದಿಸಿದರು. ಅವರು ದುರಾಸೆ ಉಳ್ಳವರಾಗಲಿಲ್ಲ ಹಣ ಸಂಪಾದನೆಗೆ ಕಾನೂನು ವಿರುದ್ಧ ಅವರು ಯಾವ ಕಾರ್ಯಗಳನ್ನೂ ನಿರ್ವಹಿಸಲಿಲ್ಲ.

ಒಂದು ವೇಳೆ ಕರ್ಮಕಾಂಡದ ಭಾಗವು ಪ್ರಸನ್ನ ಅಥವಾ ಶರಣಾಗತಿಗೆ ಪ್ರಾಧಾನ್ಯತೆ ಕೊಡದಿದ್ದರೆ ಈ ಭಾಗವನ್ನು ಹೊಂದಿರುವ ಸಂಪೂರ್ಣ ವೇದವನ್ನು ನಾವೇಕೆ ಹೊಗಳಬೇಕು ಸ್ತುತಿಸಬೇಕು? ದೇವಾನುದೇವತೆಗಳು ಯಾಗಗಳನ್ನು ಮಂತ್ರಗಳ ಮೂಲಕ ಸ್ತುತಿಸಿದ್ದಾರೆ. ಅಂತ್ಯದಲ್ಲಿ (ಕಟ್ಟ ಕಡೆಗೆ) ನಾವು ಏನೇ ಸಮರ್ಪಣೆ ಮಾಡಿದರೂ ಅದು ಪರಮಶ್ರೇಷ್ಠನಾದ ಭಗವಂತನಿಗೆ ಸಲ್ಲುತ್ತದೆ. ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಇದನ್ನು ಸ್ಪಷ್ಟವಾಗಿ ತಿಳಿಸಿದ್ದಾನೆ ಕರ್ಮಕಾಂಡವಾಗಲಿ ಬ್ರಹ್ಮಕಾಂಡವಾಗಲೀ ವೇದಗಳನ್ನು ಅಷ್ಟು ಸುಲಭವಾಗಿ ಅರಿಯಲಾಗುವುದಿಲ್ಲ ವೇದಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಇತಿಹಾಸ ಮತ್ತು ಪುರಾಣವನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ.



**ಜಿ.ಪಿ. ಲಕ್ಷ್ಮೀದೇವಿ**
**9900128835**

## ಜನನ



ಸಂಘದ ಸದಸ್ಯ ಶ್ರೀ ಆರ್.ಎ. ಶ್ರೀನಿವಾಸ್ ಅವರ ಮಗ–ಸೊಸೆ ಶ್ರೀ ನಾಗಾರ್ಜುನ ಮತ್ತು ಶ್ರೀಮತಿ ವೀಣಾ ಅವರಿಗೆ 26.12.2025 ರಂದು ಗಂಡುಮಗುವು ಜನಿಸಿದೆ.

***********

ಸಂಘದ ಸದಸ್ಯ ಶ್ರೀ ಸುಹಾಸ್ ನಾಗರಾಜನ್–ಶ್ರೀಮತಿ ಸಂಜನಾ ದಂಪತಿಗಳಿಗೆ 05–01–2026ರಂದು ಹೆಣ್ಣು ಮಗುವು ಜನಿಸಿದೆ.

***********

ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಆರ್.ಎಸ್. ವೆಂಕಟೇಶ್ ಅವರ ಪುತ್ರಿ ಹಾಗೂ ಸಂಘದ ಸದಸ್ಯೆ ಶ್ರೀಮತಿ ದೀಪ್ತಿ–ಶ್ರೀ ಅಜಯ್ ರಾವ್ ದಂಪತಿಗಳಿಗೆ 04–02–2025 ರಂದು ಹೆಣ್ಣು ಮಗುವು ಜನಿಸಿದೆ.

**ಸಂಘವು ನವಜಾತ ಶಿಶುಗಳಿಗೆ ಆಯುರಾರೋಗ್ಯ ಮತ್ತು ಉತ್ತಮ ಸಂಸ್ಕಾರಯುಕ್ತ ವಿದ್ಯಾಯೋಗವನ್ನು ಹಾರೈಸುತ್ತದೆ.**

# ಸಜ್ಜನಿಕೆಯ ಸಾಕಾರಮೂರ್ತಿ ಸರಸ್ವತಿ ನಟರಾಜನ್



ಇತ್ತೀಚೆಗೆ ನಮ್ಮನ್ನಗಲಿದ, ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದ ಶ್ರೀಮತಿ ಸರಸ್ವತಿ ನಟರಾಜನ್ ಅವರ ಜೀವನವು ಕಲೆ, ಸೇವೆ ಮತ್ತು ಸೌಜನ್ಯದ ಸುಂದರ ಸಂಗಮವಾಗಿ ಮೂಡಿಬಂದಿದ್ದಿತು.

ಸಂಗೀತ ಆರಾಧಕರ ಕುಟುಂಬದಲ್ಲಿ ಜನಿಸಿದ ಅವರು ಗಾಯಕಿ, ವೀಣಾವಾದಕಿ ಹಾಗೂ ಸಂಗೀತ ಸಂಯೋಜಕಿಯೂ ಆಗಿದ್ದರು. ವಿದ್ವತ್ ಪರೀಕ್ಷೆಯಲ್ಲಿ ವೀಣಾವಾದನದಲ್ಲಿ ರಾಜ್ಯಕ್ಕೇ ಪ್ರಥಮ ಸ್ಥಾನ ಗಳಿಸಿದ ಅವರಿಗೆ ಸಂಗೀತವು ಉಸಿರಿನಂತೆ.

ಕುಟುಂಬದ ಸದಸ್ಯರನ್ನೂ ಒಳಗೊಂಡಂತೆ ಅನೇಕ ಶಿಷ್ಯರಿಗೆ ಸಂಗೀತ ಶಿಕ್ಷಣ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸಂಗೀತದೊಂದಿಗೆ ಶಿಸ್ತು, ಸಂಸ್ಕಾರ ಮತ್ತು ಕಲೆಯ ಬಗ್ಗೆ ಪ್ರೀತಿ ಮೂಡಿಸುವ ಮಹತ್ಕಾರ್ಯ ಇವರಿಂದ ಆಗಿದೆ. ಇವರಿಂದ ಸಂಗೀತ ಕಲಿತ ವಿದ್ಯಾರ್ಥಿಗಳು ಇಂದಿಗೂ ಅವರನ್ನು ಅತ್ಯಂತ ಗೌರವದಿಂದ ನೆನಪಿಸಿಕೊಳ್ಳುತ್ತಾರೆ.

ಶಿಕ್ಷಕಿಯಾಗಿರುವುದರ ಜೊತೆಗೆ ಅವರು ಒಬ್ಬ ಉತ್ತಮ ವಿದ್ಯಾರ್ಥಿಯೂ ಆಗಿದ್ದರು. ಕಲಿಯಬೇಕೆಂಬ ಅವರ ಉತ್ಸಾಹ ಎಂದೂ ಬತ್ತಿರಲಿಲ್ಲ. ಹೊಸ ರಚನೆಯಾಗಲಿ, ಹೊಸ ಅಡಿಗೆಯಾಗಲಿ – ಕಲಿಯಲು ಮತ್ತು ಪ್ರಯೋಗಿಸಲು ಅವರಲ್ಲಿ ಯಾವಾಗಲೂ ಆಸಕ್ತಿ ಮತ್ತು ಉತ್ಸುಕತೆ ತುಂಬಿರುತ್ತಿತ್ತು. ಈ ಗುಣದಿಂದಾಗಿಯೇ ಅವರು ಇಳಿವಯಸ್ಸಿನಲ್ಲಿಯೂ ಯುವ ಮನಸ್ಸಿನವರಾಗಿಯೇ ಉಳಿದರು.

ಅವರು ಕಲಾವಿದೆ ಮಾತ್ರವಲ್ಲ, ಒಬ್ಬ ಆದರ್ಶ ಗೃಹಿಣಿಯೂ ಆಗಿದ್ದವರು. ಕುಟುಂಬದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾ, ಮನೆಯನ್ನು ಪ್ರೀತಿ ಮತ್ತು ಸೌಹಾರ್ದದಿಂದ ತುಂಬಿದ ಮಂದಿರವನ್ನಾಗಿ ರೂಪಿಸಿದ್ದರು. ಬೃಹಚ್ಚರಣ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿಯೂ ತಮ್ಮನ್ನು ಸಂಘದ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು.

ಶ್ರೀಮತಿಯವರದು ಉತ್ಸಾಹಭರಿತ ವ್ಯಕ್ತಿತ್ವ. ಸದಾ ಹರ್ಷಭರಿತರಾಗಿ, ಸಕಾರಾತ್ಮಕ ಮನೋಭಾವದಿಂದ ಎಲ್ಲರಲ್ಲಿಯೂ ಬೆರೆಯುತ್ತಿದ್ದವರು. ಸದಾ ಸಂತೃಪ್ತಿಯಿಂದಿರುತ್ತಿದ್ದ ಅವರು, ಜೀವನದಲ್ಲಿ ಸಣ್ಣ–ಪುಟ್ಟ ವಿಷಯಗಳಲ್ಲಿಯೇ ಸಂತೋಷ ಕಂಡುಕೊಳ್ಳುತ್ತಿದ್ದವರು.



ಅರ್ಥಪೂರ್ಣ ಹಾಗೂ ಉಪಯುಕ್ತ ಜೀವನವನ್ನು ನಡೆಸಿದ ಸರಸ್ವತಿಯವರು, ತಮ್ಮನ್ನು ಆಶ್ರಯವಾಗಿ ಕಂಡವರಿಗೂ, ತಮ್ಮನ್ನು ಮಾರ್ಗದರ್ಶಕರಾಗಿ ನೋಡಿದವರಿಗೂ ಸದಾ ದಾರಿದೀಪವಾಗಿದ್ದರು. ಅವರ ಮಾತು, ಅವರ ನಡೆ, ಅವರ ಜೀವನವೇ ಅನೇಕರಿಗೆ ಪ್ರೇರಣೆ.

ಶ್ರೀಮತಿ ಸರಸ್ವತಿ ನಟರಾಜನ್ ಅವರ ಸಾರ್ಥಕಪೂರ್ಣ ಜೀವನ ನಮ್ಮೆಲ್ಲರಿಗೂ ಆದರ್ಶ. ಅವರ ಸಂಗೀತ, ಸೇವಾಮನೋಭಾವ ಮತ್ತು ಸಕಾರಾತ್ಮಕತೆ ಸದಾಕಾಲವೂ ನೆನಪಿನಲ್ಲಿ ಉಳಿಯುತ್ತದೆ.

**ಡಾ॥ ಶುಭ ಗಾಯತ್ರಿ ಎನ್.**
**9482536047**

## ತಪ್ಪು – ಒಪ್ಪು

"ಬೃಹಚ್ಚರಣ"ದ ಆಗಸ್ಟ್ – ಡಿಸೆಂಬರ್ ಸಂಚಿಕೆಯಲ್ಲಿ("ಸುವರ್ಣ" ಸಂಚಿಕೆಯಲ್ಲಿ) ಪುಟ 65ರಲ್ಲಿ "ಹುಡದಿ" ಎಂಬ ಪದಕ್ಕೆ ಅರ್ಥವನ್ನು Loud Uproar ಎಂದು ಓದಿಕೊಳ್ಳಬೇಕಾಗಿ ವಿನಂತಿ. ಮುದ್ರಣದೋಷಕ್ಕಾಗಿ ವಿಷಾದಿಸುತ್ತೇವೆ.

# ಸರಳ, ಸೌಮ್ಯ, ಸ್ನೇಹಪರ ಮಂಜುನಾರಾಯಣ್



ಸರಳ, ಸೌಮ್ಯ, ಸ್ನೇಹಪರ, ನಮ್ರ ಸ್ವಭಾವದ ಧರ್ಮಭೀರು ವ್ಯಕ್ತಿ. ಮಿತಭಾಷಿ, ಸಹನಾಶೀಲ ಜೀವಿ.

ಮೇಲಿನ ಪದಗಳು ನನ್ನ ಭಾವನವರಾಗಿದ್ದ ದಿ॥ ಶ್ರೀ ಮಂಜುನಾರಾಯಣ್ ಅವರ ವ್ಯಕ್ತಿತ್ವದ ಸೂಕ್ತ ನುಡಿಚಿತ್ರಣ.

ದಿ॥ ಶ್ರೀ ಟಿ.ಎಸ್. ಕೃಷ್ಣನ್ ಮತ್ತು ಶ್ರೀಮತಿ ವಿಜಯಾಂಬ ದಂಪತಿಗಳಿಗೆ 5ನೇ ಡಿಸೆಂಬರ್ 1969ರಂದು ಜನಿಸಿದ ಶ್ರೀ ಮಂಜುನಾರಾಯಣ್ ಅವರಿಗೆ ಕಾಮರ್ಸ್ ಕ್ಷೇತ್ರದಲ್ಲಿ ಸಹಜವಾದ ಪ್ರತಿಭೆ ಇದ್ದುದರಿಂದ ಆ ವಿಷಯದಲ್ಲಿ ಪದವಿ ಗಳಿಸಿ ಉದ್ಯೋಗ ಜೀವನಕ್ಕೆ ಕಾಲಿಟ್ಟರು. ಶೀಘ್ರದಲ್ಲಿಯೇ ಸ್ಟೇಷನರಿ ವ್ಯಾಪಾರದಲ್ಲಿ ಅವಕಾಶವು ಲಭ್ಯವಾಯಿತು. ಅದನ್ನು ಸದುಪಯೋಗಪಡಿಸಿಕೊಂಡು ಸಹೋದರ ಶಿವರಾಂ ಅವರೊಡನೆ ಆ ವ್ಯಾಪಾರವನ್ನು ಕೊನೆಯವರೆಗೂ ಯಶಸ್ವಿಯಾಗಿ ನಡೆಸಿದರು. ಜೊತೆಗೆ ಜೀವವಿಮಾ ಕಂಪನಿಯೊಡನೆ ಸಹಯೋಗವನ್ನು ಗಳಿಸಿ, ಬೆಳೆಸಿಕೊಂಡರು.


ಮಂಜುನಾರಾಯಣ್ ಅವರಿಗೆ ವಿವಾಹಯೋಗ ಕೂಡಿಬಂದಿತು. ಸರ್ಜಾಪುರದ ಹೆಣ್ಣುಮಗಳು ಶ್ರೀಮತಿ ವನಿತಾ ಅವರ ಕೈಹಿಡಿದು ಮನೆಬೆಳಗಿದರು. ಇಂದು ದಂಪತಿಗಳಿಗೆ 17 ವರ್ಷದ ಪುತ್ರನಿದ್ದಾನೆ.

ಸ್ವಭಾವತಃ ನನ್ನ ಭಾವನವರು ಮಿತಭಾಷಿಯಾಗಿದ್ದರೂ ಬಂಧುಮಿತ್ರರ ಒಡನಾಟವನ್ನು ಅಪೇಕ್ಷಿಸುತ್ತಿದ್ದವರು. ಬೃಹಚ್ಚರಣ ಸಂಘವು 2010ರಲ್ಲಿ ಪುನರುಜ್ಜೀವನಗೊಂಡ ನಂತರ ಸಂಘದ ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಕೊನೆಯವರೆಗೂ ಸೇವೆ ಸಲ್ಲಿಸಿದರು. ಆಗಾಗ ಉಂಟಾಗುತ್ತಿದ್ದ ಅನಾರೋಗ್ಯದ ನಡುವೆಯೂ ಸಂಘವು ಹಮ್ಮಿಕೊಳ್ಳುತ್ತಿದ್ದ ಎಲ್ಲ ಕಾರ್ಯಕ್ರಮಗಳಿಗೂ ನೆರವು, ಪ್ರೋತ್ಸಾಹ ನೀಡಿದ್ದಾರೆ. ಶ್ರೀಯುತರು ಸಮಿತಿಯ ಸದಸ್ಯರಿಂದ ಸಂಘದ ಹಿತೈಷಿ ಮತ್ತು ಸರಳ, ಸೌಮ್ಯ ವ್ಯಕ್ತಿ ಎಂದು ಹೆಸರುಗಳಿಸಿದವರು.

ಅವಕಾಶ ದೊರೆತಾಗಲೆಲ್ಲ ಮೈಸೂರಿಗೆ ಪಯಣಿಸಲು ಅಪೇಕ್ಷಿಸುತ್ತಿದ್ದ ಭಾವನವರು ಆ ನಗರದ ಮೇಲೆ ವಿಶೇಷ ಒಲವನ್ನು ಬೆಳೆಸಿಕೊಂಡಿದ್ದರು. ಜೊತೆಗೆ, ನಮ್ಮಲ್ಲನೇಕರಂತೆ ಪ್ರವೃತ್ತಿಯಿಂದ ಸಂಗೀತವನ್ನು ಇಷ್ಟಪಡುತ್ತಿದ್ದರು.

ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ಪರಿವಾರದಲ್ಲಿ ಸಂತಸ, ಪ್ರೀತಿ–ವಾತ್ಸಲ್ಯಗಳು ಬೆಳೆಯುವಂತೆ ನೋಡಿಕೊಂಡ ಭಾವನವರು ನಮ್ಮ ನೆನಪಿನಲ್ಲಿ ಸದಾ ಹಸಿರಾಗಿ ನೆಲೆಸಿರುತ್ತಾರೆ. ಯಾವುದೇ ಸಂದರ್ಭವಿದ್ದರೂ ಅವರು ಅದನ್ನು ಸಮಚಿತ್ತದಿಂದ ನಿಭಾಯಿಸುತ್ತಿದ್ದವರು. ಅವರ ಅನುಪಸ್ಥಿತಿಯಲ್ಲಿ ನಾವೆಲ್ಲ ಅವರಮೇಲೆ ಎಷ್ಟು ಅವಲಂಬಿತರಾಗಿದ್ದೆವು ಎಂಬುದು ಈಗ ಗೋಚರವಾಗುತ್ತಿದೆ.

ನನ್ನ ಭಾವ ಶ್ರೀ ಮಂಜುನಾರಾಯಣ್ ಅವರು ಇಂದು ಲೌಕಿಕದಲ್ಲಿ ನಮ್ಮೊಡನೆ ಇಲ್ಲ ಆದರೆ ನಮ್ಮ ಹೃದಯಗಳಲ್ಲಿ ಸದಾ ನೆಲಸಿರುತ್ತಾರೆ.



**ಸೋನಿಯಾ ಶಿವರಾಮ್**
**9880755587**

# ಸನಾತನೀ ನೃತ್ಯ ಧಾರಾ



ಸನಾತನ ಪರಂಪರೆಯಲ್ಲಿ ನೃತ್ಯಕ್ಕೆ ಮೇರು ಸ್ಥಾನ ಒದಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿ ನಮ್ಮ ಸನಾತನ ದೇವಾನುದೇವತೆಗಳ ಹೆಸರಿನೊಂದಿಗೆ ಅವರ ನೃತ್ಯ ಪರಿಣಿತಿಯ ನಾಮವೇ ಸಾಕ್ಷಿ. ಶಿವನಿಗೆ ನಟರಾಜ, ವಿಷ್ಣುವಿಗೆ ವೃತ್ತಿನಾಯಕ, ಕಾಳಿಂಗ ನರ್ತನ ಕೃಷ್ಣ, ನಾಟ್ಯ ಸರಸ್ವತಿ, ನೃತ್ಯ ಲಕ್ಷ್ಮಿ, ಪಾರ್ವತಿಯು ನೃತ್ಯ ಪರಾದೇವತೆ, ನರ್ತನ ಗಣಪತಿ, ಹೀಗೆ ದೇವತೆಗಳು ಅವರ ನೃತ್ಯ ಪ್ರಾವೀಣ್ಯತೆಗೆ ಬಿರುದಾಂಕಿತರಾಗಿದ್ದಾರೆ. ದೇವಾನುದೇವತೆಗಳು ನೃತ್ಯಪ್ರಿಯರು ಎಂದು ನಾವು ತಿಳಿಯಬಹುದು. ಹಾಗಾಗಿಯೇ ನಮ್ಮ ದೇವತಾ ಪೂಜಾ ಸಂಕಲ್ಪಗಳಲ್ಲಿ "ನೃತ್ಯಂ ಸಮರ್ಪಯಾಮಿ" ಎಂಬ ಉಕ್ತಿ ಪ್ರಾಚೀನ ಕಾಲದಿಂದ ಬಂದಿದೆ. ಹೀಗೆ ನೃತ್ಯದ ಪ್ರಾಚೀನತೆಯು ಅನಾದಿ ಕಾಲದಿಂದಲೂ ಬಂದದ್ದು ವಿವಿಧ ಗ್ರಂಥಗಳಿಂದಲೂ ತಿಳಿದಿದೆ. ಭರತನು ನಾಟ್ಯಶಾಸ್ತ್ರದಲ್ಲಿ ಕೂಡ ಸನಾತನ ಕಾಲದಿಂದಲೂ ನೋಡಿರುವಂತಹ ನಟರಾಜನ ನೃತ್ಯವನ್ನು ಅಷ್ಟೇ ಇಲ್ಲಿ ಉಲ್ಲೇಖಿಸುತ್ತಿದ್ದೇನೆ ಹಾಗೂ ವಿವರಿಸಿದ್ದೇನೆ ಎಂದು ತಿಳಿಸುತ್ತಾನೆ.

ರೂಪಕಗಳನ್ನು ಒಳಗೊಂಡ ನಾಟ್ಯವೂ ಕೂಡ ಅನಾದಿಯಿಂದಲೂ ನಡೆಯುತ್ತಿದ್ದುದು ಕಂಡುಬರುತ್ತದೆ. ತ್ರೇತಾಯುಗದ ಕೊನೆಯಲ್ಲಿ ಶ್ರೀರಾಮ ಅವತಾರವು ಪೂರ್ಣಗೊಂಡಾಗ, ಅಧರ್ಮವು ಹೆಚ್ಚಾಗಿ ಎಲ್ಲರೂ ಅರಿಷಡ್ವರ್ಗಗಳ ಅಧೀನದಲ್ಲಿರಲು, ಇಂದ್ರಾದಿ ದೇವತೆಗಳು ಬ್ರಹ್ಮನಲ್ಲಿಗೆ ಬಂದು ಲೋಕದಲ್ಲಿ ಕಲ್ಯಾಣವನ್ನುಂಟು ಮಾಡುವಂತಹ, ಕ್ರೀಡನೀಯಕವಾಗಿರುವಂತಹ, ಏನನ್ನಾದರೂ ತಿಳಿಸಿ ಎಂದು ಕೇಳುತ್ತಾರೆ. ಆಗ ಬ್ರಹ್ಮನು ಅನಾದಿಕಾಲದಿಂದಲೂ ನಡೆದುದನ್ನು ಸ್ಮರಿಸಿ ಪಂಚಮವೇದವಾದ ನಾಟ್ಯ ವೇದವನ್ನು ಇಂದ್ರನಿಗೆ ತಿಳಿಸುತ್ತಾನೆ. ಇದನ್ನು ಕೇಳಿ ಇಂದ್ರನು ಇಂತಹ ಮಹಾಜ್ಞಾನಸಿದ್ಧಿಗೆ ಮಹಾಮುನಿಗಳೇ ಸಮರ್ಪಕರೆಂದು, ಭರತಾದಿ ಮುನಿಗಳನ್ನು ಕರೆತರುತ್ತಾನೆ. ಬ್ರಹ್ಮನು ಭರತಾದಿ ಮುನಿಗಳಿಗೆ ನಾಟ್ಯ ಶಾಸ್ತ್ರವನ್ನು ಬೋಧಿಸುತ್ತಾನೆ. ಇದನ್ನೇ ಮುಂದೆ ಭರತ ಮುನಿಯು, ನಾಟ್ಯಶಾಸ್ತ್ರ ಗ್ರಂಥವಾಗಿ ರಚಿಸಿ, ಅದು ಪರಂಪರೆಯಲ್ಲಿ ಹರಿದು, ಇಂದಿಗೂ ಸಹ ಜಗತ್ತಿನಲ್ಲೇ ಅತ್ಯಂತ ಪುರಾಣ ಗ್ರಂಥವೆಂದು ಅನಿಸಿಕೊಂಡಿದೆ. ದಶ ರೂಪಕಗಳನ್ನು ಒಳಗೊಂಡ ನಾಟ್ಯ ಕ್ರಮವನ್ನು ನಾಟ್ಯ ಶಾಸ್ತ್ರದಲ್ಲಿ ವಿವರಿಸಲಾಗಿದೆ. ಹಾಗೆಯೇ ಧರ್ಮಾರ್ಥಕಾಮಮೋಕ್ಷಾದಿ ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸುವಂತಹ ನೃತ್ತದ ವಿವರ ಕೂಡ ನೀಡಲಾಗಿದೆ. ಹೀಗೆ ನಾಟ್ಯವು ಎಲ್ಲ ವರ್ಣಗಳಿಗೂ ಹಾಗೂ ಸ್ತ್ರೀಯರಿಗೂ, ಸರ್ವರಿಗೂ ಜ್ಞಾನ ನೀಡುವುದಕ್ಕಾಗಿ ರೂಪಿಸಲಾದಂತಹ ವೇದವಾಗಿದೆ. ಈ ನಾಟ್ಯದಲ್ಲಿ ಸಾಧಾರಣ ನೃತ್ಯ ಅಲ್ಲದೆ, ವೈಚಿತ್ರತೆಯನ್ನುಇದಕ್ಕೆ ತರಲು ಪರಶಿವನೇ ನಂದಿಯ ಮೂಲಕ ನೃತ್ತಕರಣಗಳ ವಿವರವನ್ನು ತಿಳಿಸುತ್ತಾನೆ. ನಾಟ್ಯವು ನೃತ್ತ, ನೃತ್ಯ, ಅಭಿನಯ, ಹೀಗೆ ಹಲವಾರು ಆಯಾಮಗಳಿಂದ ಕೂಡಿದುದಾಗಿದೆ.

ಹೀಗೆ ನಿರೂಪಿಸಲಾದ ನಾಟ್ಯವನ್ನು ಭರತಾದಿಗಳು ಕಲಿತು ಸುಕುಮಾರ ನೃತ್ಯ ನರ್ತಿಸಲು ಬ್ರಹ್ಮನಲ್ಲಿ ಅಪ್ಸರೆಯರಿಗಾಗಿ ಬೇಡುತ್ತಾರೆ. ಬ್ರಹ್ಮನು 24 ಅಪ್ಸರೆಯರನ್ನು ಸೃಷ್ಟಿಸುತ್ತಾನೆ. ಹೀಗೆ ಉದ್ಧಟ ನೃತ್ಯವನ್ನು ಭರತಾದಿಗಳು ಹಾಗೂ ಸುಕುಮಾರ ನೃತ್ಯವನ್ನು ಅಪ್ಸರೆಯರು ನರ್ತಿಸುತ್ತಾರೆ. ಅಪ್ಸರೆಯರು ಉಮೆಯ ನೃತ್ಯವನ್ನು ಅನುಕರಿಸುತ್ತಾರೆ. ಭರತ ಪುತ್ರರು ಕೋಹಲ, ಮತಂಗ, ದತ್ತಿಲರು, ಭೂಮಿಗೆ ಬಂದು ನೃತ್ಯ ಗುರುಗಳು ಎನಿಸುತ್ತಾರೆ. ಉಮೆಯು ಬಾಣಾಸುರನ ಮಗಳಾದ ಉಷೆಗೆ ಈ ನೃತ್ಯವನ್ನು ಕಲಿಸುತ್ತಾಳೆ. ಉಷೆಯು ಗೋಕುಲದ ವನಿತೆಯರಿಗೆ ನೃತ್ಯ ಕಲಿಸುತ್ತಾಳೆ. ಅರ್ಜುನನು ಮುಂದೆ ಈ ವಿದ್ಯೆಯನ್ನು ಗಂಧರ್ವ ರಾಜನಾದ ಚಿತ್ರರಥನಿಂದ ಕಲಿತು ಭೂಲೋಕದಲ್ಲಿ ಬೃಹನ್ನಳೆಯಾಗಿ, ನೃತ್ಯವನ್ನು ಉತ್ತರೆಗೆ ಕಲಿಸುತ್ತಾನೆ.

ಹೀಗೆ ಸಾಗಿ ಬಂದ ನೃತ್ಯವಿದ್ಯೆಯು ಮುಂದೆ ಸ್ಥಾನಮಾನ ಪಡೆದು ದೇವಾಲಯದಲ್ಲಿ ಹಾಗೂ ರಾಜಸಭೆಗಳಲ್ಲಿ ಶೋಭಾಯಮಾನವಾಗಿ ಪ್ರಯೋಗವಾಗುತ್ತಿತ್ತು. ಪ್ರಯೋಗ ಮಾತ್ರಂ ಇದಂ ನೃತ್ತಂ, ಎಂದು ನಾಟ್ಯ ಶಾಸ್ತ್ರದಲ್ಲಿ ಹೇಳಲಾಗಿದೆ. ಮುಸಲ್ಮಾನರ ದಾಳಿಯಿಂದ ತತ್ತರಿಸಿದ ಭಾರತ ಭೂಮಿಯಲ್ಲಿ ನೃತ್ಯವೂ ತತ್ತರಿಸಿತು. ನಂತರ ಆಂಗ್ಲರ ಆಳ್ವಿಕೆಯಲ್ಲಿ ಕೂಡ ನೃತ್ಯ ನಿಪುಣೆಯರನ್ನು ದೇವದಾಸಿಯರೆಂದು ಕರೆದು ಅವರ ಅಸ್ತಿತ್ವಕ್ಕೆ ಧಕ್ಕೆ ಉಂಟಾಯಿತು. ಆದರೆ ಸ್ವಾತಂತ್ರ್ಯದ ನಂತರ ಈ ಕಲೆಯು ಅತ್ಯುನ್ನತ ಶಿಖರಗಳನ್ನು ಏರುತ್ತಾ ಬರುತ್ತಿದೆ. ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನ ದೊರೆತು ಧರ್ಮ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಕಲೆ ಎಂದು ಹೆಸರಾಗಿದೆ.

ಈಗ ಪೋಷಕರಿಗೆ ಇದರ ಜ್ಞಾನವು ಹೆಚ್ಚಾಗಿದೆ. ಭರತನಾಟ್ಯ ಕಲಿಕೆಯಲ್ಲಿ ಗುರುವನ್ನು ಅರಸಿ ಹೊರಟಾಗ ಹೇಗೆ ಹುಡುಕಬೇಕೆಂಬುದು ಚಿಂತೆಯಾಗಿದೆ. ಎಲ್ಲ ಕಲಾಕಲಿಕೆಗಳ ಹಾದಿಯಲ್ಲಿಯೇ ಇಲ್ಲಿಯೂ ಶಿಸ್ತಿನ ಗುರುವಿನ ಅವಶ್ಯಕತೆ ಖಂಡಿತ ಇದೆ. ಶಿಸ್ತಿನ ನೆರಳಲ್ಲಿ ಸಾಗುವ ಕಲೆ, ಗುರುವಿಗೆ ಸಮರ್ಪಣೆ ಆಗುವ ಬುನಾದಿಯ ಮೇಲೆ ನಿಂತಿರುತ್ತದೆ. ಕಳೆದ 200 ವರ್ಷಗಳಿಂದ ಮತ್ತೆ ಪುಟವೆತ್ತಿದ ನೃತ್ಯ, ಸ್ಥಳದ ಅನುಸಾರವಾಗಿ ಬಾನಿ ಅಥವಾ ಶೈಲಿಯೆಂದು ಪ್ರಸಿದ್ಧಿಗೊಂಡಿದೆ. ಹೀಗಾಗಿ ಪಂದನಲ್ಲೂರು ಶೈಲಿ, ಮೈಸೂರುಶೈಲಿ, ಕೋಲಾರಶೈಲಿ, ತಂಜಾವೂರುಶೈಲಿ ಹೀಗೆ ಹಲವಾರು ಪರಂಪರೆಗಳ ಈ ಝುರಿಗಳು

ಹರಿಯಲೇಬೇಕು, ಆದರೆ ಕೊನೆಗದು ನದಿಯನ್ನು ಸೇರಲೇಬೇಕು. ಆ ಮಹಾನದಿಯೇ ಅನಾದಿ ಇಂದ ಬಂದಂತಹ ನಮ್ಮ ನೃತ್ಯಪರಂಪರೆ. ಇದರಲ್ಲಿ ಎಲ್ಲಾ ಶೈಲಿ ಅಥವಾ ಬಾನಿಗಳ ಜೊತೆಯಲ್ಲಿ ಇರುವುದು ಅನಾದಿಯ ನಮ್ಮ ನೃತ್ಯ ಪರಂಪರೆ. ಡಾ. ಪದ್ಮಾ ಸುಬ್ರಹ್ಮಣ್ಯಂ ಅವರು ಪುನರುತ್ಥಾನಗೊಳಿಸಿದಂತಹ ನೃತ್ತಕರ್ಣಗಳು ಇದರಲ್ಲಿದೆ. ಹಾಗಾಗಿ ಝರಿಗಳು ಅಲ್ಲಲ್ಲಿ ಸೇರುವ ಹಾಗೆ ಶೈಲಿಗಳು ಅಲ್ಲಲ್ಲಿ ಜೊತೆ ಗೂಡಿದರೆ ಅದು ಪರಂಪರೆಯನ್ನು ಅನುಸರಿಸುವ ದಾಟಿಯೇ ಹೌದು. ಹೀಗೆ ನದಿಯು ಕೊನೆಗೆ ಸೇರುವುದು ಸಮುದ್ರವನ್ನು, ನೃತ್ಯಕಲೆ ಎಂಬುವ ನದಿಯು ಸೇರುವುದು ಪುರುಷಾರ್ಥ ಸಾಧನೆಯ ಮಹೋದಧಿಯನ್ನು. ಭರತನಾಟ್ಯ, ಕೂಚಿಪುಡಿ, ಮೋಹಿನಿಅಟ್ಟಂ, ಕಥಕಳಿ, ಕಥಕ್, ಸತ್ರಿಯ, ಮಣಿಪುರಿ, ಒಡಿಸ್ಸಿ, ಈ ಎಲ್ಲಾ ನೃತ್ಯ ಪ್ರಕಾರಗಳ ಆಧಾರಸ್ತಂಭವಾಗಿರುವಂತಹ ನಾಟ್ಯಶಾಸ್ತ್ರ, ಹಾಗೂ ನೃತ್ಯದ ಉದ್ದೇಶವನ್ನು ತಿಳಿಯುವಂತಹ ಸಾಮಾಜಿಕ ವಿವೇಕವನ್ನು ಈ ಮುಂದೆ ನಾವು ನೋಡಬಹುದಾಗಿದೆ. ನೃತ್ಯಕಲಿಕೆಯಲ್ಲಿ ಪೋಷಕರ ಆಸಕ್ತಿಯೇ ಮುಖ್ಯವಾಗಿರುವುದರಿಂದ, ಮುಂದಿನ ಪೀಳಿಗೆಯಲ್ಲಿ ಸನಾತನದ ಉಳಿವಿಗೆ ಅವರು ಪಾತ್ರರಾಗಬೇಕಾಗಿದೆ.



**ಡಾ॥ ನಾಗಲಕ್ಷ್ಮಿ ನಾಗರಾಜನ್**
**99801 34090**

# ವಸಂತ ಬಂದ, ಋತುಗಳ ರಾಜ! (ಲಘು ಬರಹ)



ಚೈತ್ರ ಮಾಸವು ಸಾಗುತ್ತಿದೆ, ಇನ್ನೂ ವೈಶಾಖವು ಕಾಲಿಡಲಿದೆ. ಬಿಸಿಲು ಸಾಕೆನಿಸುವಷ್ಟು ಭಯಂಕರವಾಗಿದೆ. ನೆಂಟರಿಷ್ಟರು, ಗೆಳೆಯರು, ಪರಿಚಯಸ್ಥರ ಭೇಟಿಯಾದಾಗ ಉಭಯಕುಶಲೋಪರಿಗಳಲ್ಲಿ ಬಿಸಿಲ ಬೇಗೆಯದೇ ಮುಖ್ಯ ವಿಷಯ.

ಈ ಸೆಕೆಯ ಹಾವಳಿಯಲ್ಲಿ ವಸಂತ ಋತುವಿನ ವೈಭವ ನಮ್ಮ ಗಮನಕ್ಕೆ ಬರುತ್ತಿಲ್ಲ!

ಚೈತ್ರ-ವೈಶಾಖ ಮಾಸಗಳ ಪ್ರಖರತೆಗೆ ದೇಹ ಬಳಲದಂತೆ ನೋಡಿಕೊಂಡೇ ಬೇಸಿಗೆಯ ಸೊಗಡಿನ ಅಸ್ವಾದನೆ ಸಾಧ್ಯ!

ಶ್ರಾವಣ-ಭಾದ್ರಪದ ಮಾಸಗಳಲ್ಲಿ (ಮಳೆಗಾಲದಲ್ಲಿ), ಸಾಧಾರಣವಾಗಿ ನೀರು ಸಮೃದ್ಧವಾಗಿರುವಾಗ ಮರ ಗಿಡಗಳು ಹಸಿರುದಳೆಯುವುದರಲ್ಲಿ ವಿಶೇಷವಿಲ್ಲ. ಚೈತ್ರ-ವೈಶಾಖಗಳಲ್ಲಿ ಸುರಿಯಬಹುದಾದ ಚೂರು ಪಾರು ಮಳೆಯಲ್ಲಿಯೇ ಮಾವು ಮೊದಲುಗೊಂಡು ಹಣ್ಣು-ಹಂಪಲು, ಚಿಗುರುಗಳು ಸಡಗರದಿಂದ ಮೈದಳೆಯುವುದೊಂದು ವಿಶೇಷ! ಅದನ್ನು ನೋಡುತ್ತಿರುವುದೇ ಕಣ್-ಮೈ-ಮನಸ್ಸುಗಳಿಗೆ ಹಬ್ಬ! ಹಣ್ಣಿನಂಗಡಿಗಳಲ್ಲಿ, ತಳ್ಳು ಗಾಡಿಗಳಲ್ಲಿ ವರಸೆ ವರಸೆಯಾಗಿ ಪೇರಿಸಲ್ಪಟ್ಟಿರುವ, ಈ ಸೀಸನ್‌ಗೆ ಸರಿಯಾಗಿ ಪ್ರತ್ಯಕ್ಷವಾಗುವ ವಿವಿಧ ಹಣ್ಣುಗಳು ನೋಡಲಿಕ್ಕೆ ಚಂದ! (ಬೆಲೆಗಳ ಬಗ್ಗೆ ಮಾತನಾಡುವ ಹಾಗಿಲ್ಲ!)

ಬೇಸಿಗೆಯ ದಿನಗಳ ಒಂದು ವಿಶೇಷ, ಗಮನ ಸೆಳೆಯುವ ಪ್ರಖರ ಬೆಳಕು. ಮನೆಯೊಳಗೆಲ್ಲೂ ದೀಪ ಬೆಳಗಬೇಕಾಗಿಯೇ ಇಲ್ಲ! ಆಚೆ ಸೂರ್ಯ ಭಗವಾನನ ಇಂಥ ಧಾರಾಳತನಕ್ಕೆ ಮೈಯೊಡ್ಡಬೇಕೆಂಬ ಇಚ್ಛೆಯುಂಟು ಮಾಡುವ ಬೆಳಕು. (ಮೆಡಿಟರೇನಿಯನ್ ಮತ್ತು ಅದರ ಸುತ್ತಲಿರುವ ಪ್ರದೇಶಗಳಲ್ಲಿ ಈ ರೀತಿಯ ನಿಚ್ಚಳ ಬೆಳಕು ವರ್ಷವಿಡೀ ಇರುತ್ತದೆಯಂತೆ!)

ಚೈತ್ರ-ವೈಶಾಖಗಳ ಬಿಸಿಲು ಗಾಳಿಗಳಿಗೆ ಹಿತಮಿತವಾಗಿ ಮೈಯ್ಯೊಡ್ಡಿ ಸಣ್ಣಪುಟ್ಟ ನೋವು-ನುಡಿ, ಆರೋಗ್ಯದ ಚಿಲ್ಲರೆ ಸಮಸ್ಯೆಗಳಿಂದ ಮುಕ್ತರಾಗುವುದು ಸಾಧ್ಯ. ಜೊತೆಗೆ, ಬೇಸಿಗೆಯಿಂದ ನನ್ನಂಥ ತಿಂಡಿಪೋತರಿಗೆ ವೈಯುಕ್ತಿಕವಾಗಿ ಆಗುವ ಪ್ರಯೋಜನವೆಂದರೆ, ಹಸಿವು, apetite ಕಡಿಮೆಯಾಗಿ ನೀರು, ಪಾನಕ, ಮಜ್ಜಿಗೆ ಇಂಥವುಗಳ ಸೇವನೆ ಹೆಚ್ಚಾಗುವುದು. ಮಳೆಗಾಲ ಶುರುವಾಗುವಷ್ಟರಲ್ಲಿ ನಿರಾಯಾಸವಾಗಿ 4–5 ಕೆಜಿ ತೂಕ ಇಳಿಕೆ ಸಾಧ್ಯ!

ಇನ್ನೆರಡು ತಿಂಗಳಲ್ಲಿ ಶುರುವಾಗಬಹುದಾದ ಮಳೆಗಾಲದ ಈತಿಬಾಧೆಗಳಿಗೆ ಮುಂಚೆ, ಈ ಸೆಕೆ, ಬೆವರು, ಸುಸ್ತು, ದಾಹಗಳನ್ನು ನಿವಾರಿಸಿಕೊಂಡೇ ಬೇಸಿಗೆಯ ಒಂದೊಂದು ಕ್ಷಣವನ್ನೂ ಸವಿಯೋಣ ಬನ್ನಿ!



**ಬಿ.ಸುಬ್ರಹ್ಮಣ್ಯಂ**
**9449869667**

# ಒಂದು ದಿನದ ಪ್ರವಾಸ – ಸೋಮವಾರ 26–01–2026

ಯಾವುದೇ ಪ್ರವಾಸವು ಆಯೋಜಿಸುವವರಿಗೆ, ಕಾರ್ಯಕರ್ತರಿಗೆ ಪ್ರಯಾಸವೇ ಸರಿ. ಆದರೆ ನನಗೋ ಮೈಸೂರ್ ಪಾಕ್ ತಿಂದು ಜೀರ್ಣಿಸಿಕೊಂಡಂತೆ.

ಬಸ್ಸಿನಲ್ಲಿನ ಚುರುಕಿನ ಹುರಿದುಂಬಿಸುವಾಟವೋ, ತಿನಿಸು, ಹಣ್ಣು, ಬಿಸ್ಕತ್ತಿನ ಹರಿದಾಟವೋ, ಮಾತಿನ ಮಲ್ಲೆಯರ ಗುಂಗಿನಾಟವೋ, ಕೊಂಡೊಯ್ದಿತು ಬೆಳಗಿನ ತಿಂಡಿಯಾತಿಥ್ಯಕೆ.

ತಾವರೇಕೆರೆಯ ಹೋಟೆಲ್ ಅತಿಥಿಯಲ್ಲಿನ ಉಪಾಹಾರವು, ಪದಾಧಿಕಾರಿಗಳೊಂದಿಗೆ ಸ್ವಯಂಹಸ್ತ ಕೈಗೂಡಿಸಿದವರ ಆತಿಥ್ಯವು ಅದ್ವಿತೀಯ! ಇಡ್ಲಿ, ವಡೆ, ಖಾರಾಭಾತ್, ಸಜ್ಜಿಗೆ ಒಂದಕ್ಕಿಂತೊಂದರದು ಮೇಲುಗೈ ಕಾಫಿ, ಟೀಗಳೊಡನೆ ಮುಕ್ತಾಯ.

ಪ್ರಾಚೀನ ಯುಗದ ಮಾಗಡಿ ರಂಗನಾಥರ ದರ್ಶನವಾಯಿತು
ಉದ್ಭವ ಮೂರ್ತಿಯು ಕಣ್ಣಾಲೆಗಳ ತುಂಬಿ ಮನಃಶಾಂತಿಯೆಡೆಗೆಳೆಯಿತು
ಮಾಗಡಿ ರಂಗನಾಥ ಸ್ವಾಮಿ ದೇವಾಲಯದ ಪ್ರಾಕಾರೋತ್ಸವದ ಸಡಗರ ನಮ್ಮೆಲ್ಲರಿಗೂ ಸೌಭಾಗ್ಯವೇ ಸರಿ!
ಮುಸುಕಿದ ಮೋಡದ ಹಿನ್ನೆಲೆಯ ತಂಪಾದ ವಾತಾವರಣವು ನಮಗಾಗಿಯೇನೋ ಎಂಬತಿತ್ತು!

ಬಾಳೆಯೆಲೆಯ ಒಬ್ಬಟ್ಟಿನ ಊಟ! ಆಂಬೊಡೆ, ಪುಳಿಯೋಗರೆ, ಹಯಗ್ರೀವ, ಪಾಯಸಗಳು, ಹಿದಕು ಬೇಳೆ ಕೂಟು, ಮಜ್ಜಿಗೆ ಹುಳಿ, ಬಿಸಿಬಿಸಿ ಸಾರು, ಗೊಜ್ಜು, ಸಂಡಿಗೆ, ಉಪ್ಪಿನಕಾಯಿ, ಮೊಸರುಗಳು ಉದರ ತಣಿಸಿದುವು!

ಸೋಮೇಶ್ವರಸ್ವಾಮಿ ದೇವಸ್ಥಾನದಲ್ಲಿ ದೇವಾಲಯದ ಇತಿಹಾಸ, ಪೂಜೆ, ದರ್ಶನ, ಸೇವಾಸಕ್ತರಿಂದ ಪ್ರಸಾದ ವಿನಿಯೋಗದೊಂದಿಗೆ ಮುಕ್ತಾಯ.

ಸಾವನದುರ್ಗದ ಶ್ರೀ ಲಕ್ಷ್ಮೀನಾರಾಯಣ ಮತ್ತು ಶ್ರೀ ಭೈರವೇಶ್ವರ ದೇವಸ್ಥಾನದಲ್ಲಿನ ದರ್ಶನ ಪಾವಿತ್ರ್ಯತೆಯನುಭವವನ್ನು ನೀಡಿತು. ಸಾವನದುರ್ಗದ ಇಳಿಜಾರಿನ ನುಣುಪುಗಲ್ಲಿನ ಬೃಹದಾಕಾರದ ಬೆಟ್ಟವು ಪ್ರಕೃತಿಯ ವೈಚಿತ್ರ್ಯಗಳಲ್ಲೊಂದು!



ವಾಪಸಾಗುತ್ತ, ರಾಮನಗರದಲ್ಲಿದ ಕಾಮತ್ ಲೋಕರುಚಿಯ ಅವಲಕ್ಕಿ ಬಾತ್, ಮೊಸರನ್ನ ಸವಿದವರಿಗಷ್ಟೇ ಗೊತ್ತು ಅದರ ರುಚಿ! ನಂತರದ ನಿದ್ರಾರಾಣಿಯಪ್ಪುಗೆಯಲ್ಲಿ ದ್ವಾರಕಾಭವನದಲ್ಲಿ ಇಳಿದು ಮನೆ ತಲುಪಿದಾಗಲೇ ಅರಿವಾಯಿತು ಪ್ರವಾಸ ಸಂಪನ್ನವಾಯಿತೆಂದು! ಪದಾಧಿಕಾರಿಗಳು ಸ್ವಯಂ ಸಹಾಯಹಸ್ತ ನೀಡಿದವರೊಡಗೂಡಿ ಮಾಡಿದೆಲ್ಲಾ ಹಿನ್ನೆಲೆ ಹಾಗೂ ಮುನ್ನೆಲೆಯ ಕಾರ್ಯಗಳು ಅಪ್ರತಿಮ, ಅಪೂರ್ವ, ಅದ್ಭುತ, ಶ್ಲಾಘನೀಯ, ಹಸ್ತಲಾಘವೋಚಿತ.

**ರಾಜೇಶ್ವರಿ ಆರ್.**
**9880287962**

# ಒಂದು ದಿನದ ಪ್ರವಾಸ

ಒಂದು ದಿನದ ಪ್ರವಾಸ ಎಲ್ಲರಿಗೂ ತಂತು ಉಲ್ಲಾಸ
ಹೆಮ್ಮೆಯ ನಮ್ಮ ಸಂಘ ಒಟ್ಟುಗೂಡಿಸಿತು ಜನಾಂಗ

ಬರಲಿಲ್ಲ ಯಾವ ತೊಂದರೆ
ನೆಕ್ಕಿತು ಖುಷಿಯ ಸಕ್ಕರೆ

ಪ್ರವಾಸ ಏರ್ಪಡಿಸಿದರು ಹಿರಿಯರು
ಇವರಿಗೆ ಸರಿಸಾಟಿಯಿಲ್ಲ ಇತರರು

ಆಯಿತು ದೇವರ ದರ್ಶನ ನಂಬಿಕೆ, ಭಕ್ತಿ ವಿತರಣ
ಮೈಸೂರು ಮಂಜಪತ್ತೂರು ಬೃಹಚ್ಚರಣ
ನಾವೇ ಹಾಕಿಕೊಂಡಿರುವ ಆವರಣ

ಬಸ್‌ಗಳ ಸಂಖ್ಯೆ ಏರಿತು
ಬಂದವರ ಖುಷಿ ಮೀರಿತು

ಭಕ್ತಿಯಿಂದ ಮುಗಿದರು ದೇವರಿಗೆ
ಭರವಸೆಯಿಂದ ಮರಳಿದರು ಅವರದೇ ಗುಡಿಗಳಿಗೆ

ಹಾಜರಾದವರು ಅಂದುಕೊಂಡರು "ಯೋಗ"
ಗೈರು ಆದವರು ಬರುವರು ಮುಂದಿನ ಭಾಗ



**ಸರಸ್ವತಿ ಕೆ.**
**9886652393**

# ಸವಿ ನೆನಪಿನ ಯಮಲೂರಿನ ಮನೆ

ಈ ಯಮಲೂರಿಗೆ ಯಾರು, ಏಕೆ ಈ ಹೆಸರಿಟ್ಟರೋ ಗೊತ್ತಿಲ್ಲ. ದೇವನೂರು ಎಂದು ಹೆಸರಿಡಬೇಕಿತ್ತು. ಅಷ್ಟು ಚೆಂದದ ಊರಿನಲ್ಲಿ ನನ್ನ ಪ್ರೀತಿಯ ತಾತ ಗುಂಜೂರು ಶ್ರೀನಿವಾಸಯ್ಯ ಮತ್ತು ನನ್ನ ಅಚ್ಚುಮೆಚ್ಚಿನ ಅಜ್ಜಿ ಶ್ರೀಮತಿ ಜಿ.ಎಸ್. ಕಮಲಮ್ಮನವರು ವಾಸಿಸುತ್ತಿದ್ದ ಹೆಂಚಿನ ಮನೆ ನನ್ನ ಕಣ್ಣ ಮುಂದೆ ಬಂದಾಗಲೆಲ್ಲಾ ನನ್ನ ಮನಸ್ಸು ನವಿಲಿನಂತೆ ಕುಣಿಯುತ್ತದೆ. ಅಷ್ಟು ಸುಂದರವಾದ ಮನೆಯನ್ನು ನಾನು ಈ ಜನ್ಮದಲ್ಲಿ ಮತ್ತೆ ನೋಡಲು ಸಾಧ್ಯವೇ ಇಲ್ಲ

ಗುಂಜೂರು ಶ್ರೀನಿವಾಸಯ್ಯನವರ ದೊಡ್ಡ ಮಗಳಾದ ನನ್ನ ತಾಯಿ ಜಿ.ಎಸ್. ಗೌರಮ್ಮನವರು ನನ್ನನ್ನೂ, ನನ್ನ ಅಣ್ಣನಾದ ಕೆ. ಮಂಜುನಾಥನನ್ನೂ ಪ್ರತಿ ಬೇಸಿಗೆ ಹಾಗೂ ದಸರಾ ರಜೆಯಲ್ಲಿಯೂ ಯಮಲೂರಿಗೆ ಕರೆದೊಯ್ದು ರಜೆ ಮುಗಿಯುವವರೆಗೂ ಅಲ್ಲಿ ಇರುವುದಕ್ಕೆ ಅವಕಾಶ ಕೊಡುತ್ತಿದ್ದುದ್ದು ಒಂದು ಸುವರ್ಣ ಸಮಯ!

ಈಗ ಆಧುನಿಕ ರೀತಿಯ ಎಷ್ಟೇ ದೊಡ್ಡ ದೊಡ್ಡ ಮನೆಗಳಾದರೂ ಆ ಯಮಲೂರಿನ ಮನೆಗೆ ಸರಿ ಸಾಟಿಯಾಗಲು ಬಿಡದಷ್ಟು ಸೊಬಗಿನ ಮನೆ ಅದಾಗಿತ್ತು.

ಆಗಿನ ಕಾಲದಲ್ಲಿ ಅಂದರೆ ಸುಮಾರು 1970 ರಿಂದ (ನನಗೆ 5 ವರ್ಷ) ಆ ಮನೆಯನ್ನು ನೋಡಿದ ನೆನಪು. ಕೇವಲ ಆ ಮನೆಯಷ್ಟೇ ಅಲ್ಲ, ಆ ಊರು ಸಹ ಅಂದದ ಊರು. ಭಕ್ತಿ ಮತ್ತು ನಂಬಿಕೆ ಮೂಡಿ ಬರುವಂಥ ದೇವಾಲಯಗಳು. ಅಲ್ಲದೇ ಅಷ್ಟು ಹತ್ತಿರದಿಂದ ಪ್ರತಿ ದಿನ ಏರೋಪ್ಲೇನ್ ನೋಡಿದ್ದು, ಅದು ಮೇಲೆ ಟೇಕಾಫ್ ಆದನಂತರ ರಸ್ತೆ ದಾಟುತ್ತಿದ್ದದ್ದು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಎಲ್ಲಾ ಹಳ್ಳಿಗಳಲ್ಲಿಯೂ ಜಟಕಾಗಾಡಿ, ಎತ್ತಿನ ಗಾಡಿ, ಟಾಂಗಾಗಳು ಇದ್ದರೆ, ಈ ಯಮಲೂರಿನಲ್ಲಿ ಏರೋಪ್ಲೇನ್! ಎಷ್ಟು ಧನ್ಯರು ನಾವು!

ಆ ನನ್ನ ಅಜ್ಜಿ ಮನೆಯಂತೂ ಸ್ವರ್ಗ ಇದ್ದ ಹಾಗೆ, ಅಷ್ಟು ದೊಡ್ಡ ಮನೆ. ಮನೆಯ ಗೇಟ್ ಒಳಗೆ ಹೋಗುತ್ತಿದ್ದಂತೆ ಎರಡೂ ಕಡೆ ಸೊಗಸು ಹೊಲ, ಹೊಲದ ಮಧ್ಯೆ 3–4 ನಿಮಿಷಗಳ ನಂತರ ಭಾರಿ ದೊಡ್ಡದಾದ ಮನೆ. ವಿಶಾಲವಾದ ಹಜಾರುಗಳು (Hall) ಆಗ ಕೋಣೆಗಳು (Rooms) ಅಂತ ಇರಲಿಲ್ಲ. ದೊಡ್ಡ ದೇವರಮನೆ, ಗಾಳಿ ಬೆಳಕಿನಕೊರತೆಯೇ ಇರಲಿಲ್ಲ, ಎಲ್ಲದ್ದಕ್ಕಿಂತ ಆಶ್ಚರ್ಯ ಅಂದರೆ, ಸಿಕ್ಕಾಪಟ್ಟೆ ಆಳವಿರುವ ಬಾವಿ ನೀರು. ಅದಕ್ಕೆ ದೊಡ್ಡ ಬಾವಿಕಟ್ಟೆ. 2 ಮೆಟ್ಟಲುಗಳನ್ನು ಹತ್ತಿಹೋಗುವಂಥ ಬಚ್ಚಲುಮನೆ. ಮನೆಯ ಹಿತ್ತಲಿನಲ್ಲಿ ನಮ್ಮ ಬ್ರಾಹ್ಮಣರ ಮನೆಯ ಸಂಪ್ರದಾಯದಂತೆ ಲಕ್ಷಣವಾದ ಸೊಬಗಿನ ಬೃಂದಾವನ (ತುಳಸಿಕಟ್ಟೆ).

ನಮ್ಮ ತಾತ ಗುಂಜೂರು ಶ್ರೀನಿವಾಸಯ್ಯನವರು ಆಗಿನ ಕಾಲದಲ್ಲಿಯೇ (ಮೈಸೂರು ಸ್ಟೇಟ್) ಈಗಿನ ಅಕೌಂಟೆಂಟ್ ಜನರಲ್ ಕಛೇರಿಯಲ್ಲಿ ಸೇವೆಯನ್ನು ಸಲ್ಲಿಸಿ ನಿವೃತ್ತಿಯ ನಂತರ ಯಮಲೂರಿನ ಶಾನುಭೋಗರಾಗಿದ್ದರು. ಆ ಊರಿನಲ್ಲಿ ಹೆಸರುವಾಸಿಯಾದ ವ್ಯಕ್ತಿ.

ನಾನು ಆಗ ಚಿಕ್ಕ ಹುಡುಗಿ ಸುಮಾರು 7 ವರ್ಷದ ಹುಡುಗಿ ಯಮಲೂರಿನ ಅಂಗಡಿಗೆ ಹೋದರೆ ಆ ಅಂಗಡಿಯವರು "ಶಾನುಭೋಗರ ಮನೆ ಮಗ ಬಂದ್ಯೆತೆ, ಏನು ಬೇಕೋ ಬೇಗ ಕೊಡು" ಅಂತಾ ಇದ್ರು.

ರಾತ್ರಿ ಹೊತ್ತು ಸುಮಾರು 7ರಿಂದ 8.30ರವರೆಗೂ ಬಾವಿ ಕಟ್ಟೆಯ ಬಳಿ ಮನೆಯವರೆಲ್ಲರೂ ಕುಳಿತು ಹರಟೆಯಲ್ಲಿ ಮಗ್ನರಾಗಿರುತ್ತಿದ್ದೆವು. ನನ್ನ ಅಜ್ಜಿ ತುಂಬಾ ಗಿಡಮರಗಳನ್ನು ಬೆಳೆಸಿದ್ದರು. ಶೌಚಾಲಯವಂತೂ ಮನೆಯ ಹೊರ ಭಾಗದಲ್ಲಿ ದೂರದಲ್ಲಿತ್ತು. ಈಗ ಅನ್ನಿಸ್ತಾ ಇದೆ, ಆ ಮನೆ ಸುಮಾರು ಶೇಕಡಾ 90 ರಷ್ಟು ವಾಸ್ತು ಇದ್ದ ಮನೆ ಅಂತಾ, ಏಕೆಂದರೆ ನನ್ನ ಮಾವಂದಿರು, ಚಿಕ್ಕಮ್ಮಂದಿರು, ವಿದ್ಯಾಭ್ಯಾಸದಲ್ಲಿ, ಆರೋಗ್ಯದಲ್ಲಿ, ಅಭಿವೃದ್ಧಿಯಲ್ಲಿ ಹೀಗೆ ಎಲ್ಲದರಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದರು. ಶ್ರೇಷ್ಠವಾದ ಹುದ್ದೆಯಲ್ಲಿದ್ದು, ನಿವೃತ್ತಿ ಹೊಂದಿ ಉತ್ತಮ ಜೀವನವನ್ನು ನಡೆಸುತ್ತಿದ್ದಾರೆ. ನನ್ನ ಸೋದರಮಾವ ಜಿ.ಎಸ್. ಸತ್ಯಮೂರ್ತಿಯವರು ಬಹಳಷ್ಟು ಕವನಗಳನ್ನು ಬರೆದಿದ್ದಾರೆ. ದಿನವೂ ಯಮಲೂರಿನಿಂದ ಬೆಂಗಳೂರಿಗೆ ಬಂದು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಆಗಿನ ಕಾಲದಲ್ಲಿಯೇ ವೈದ್ಯ ಪದವಿ ಗಳಿಸಿದ್ದವರು ನನ್ನ ಕಲ್ಯಾಣಿ ಚಿಕ್ಕಮ್ಮ.

ಅಂತಿಮವಾಗಿ ಹೇಳುವುದೇನೆಂದರೆ ಈಗ ಎಷ್ಟೇ ದೊಡ್ಡ ದೊಡ್ಡ ಬಂಗಲೆಗಳೂ ಸಹ ಯಮಲೂರಿನ ನಮ್ಮ ಮನೆಗೆ ಸರಿಸಾಟಿಯಲ್ಲವೆಂದು ನನ್ನ ಮನಸ್ಸಿನ ಭಾವನೆ. ಎರಡೂ ಕಡೆಯ ಹೊಲವನ್ನು ಹಾದು ಸೇರುವ ಮನೆಯನ್ನು ಕಣ್ಮುಂದೆ ತಂದುಕೊಂಡರೆ ನನ್ನ ಅಜ್ಜಿ ತಾತನವರ ಬಗ್ಗೆ ಸಂತಸ ಉಕ್ಕಿ ಹರಿಯುತ್ತದೆ. ಆನಂದ ಭಾಷ್ಪ ಮೂಡುತ್ತದೆ. ಸದಾ ಕಾಲಕ್ಕೂ ಅತ್ಯಂತ ಆಕರ್ಷಣೀಯವಾದ ಮನೆ ಎಂಬುದೇ ಅದರ ವಿಶೇಷತೆ.



**ಸರಸ್ವತಿ ಕೆ.**
**9886652393**

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ – ಅನಿಸಿಕೆ

ಪ್ರತಿ ವರ್ಷ ಮಹಿಳಾ ದಿನಾಚರಣೆಯನ್ನು ಎಲ್ಲೆಲ್ಲೂ ಲವಲವಿಕೆಯಿಂದ ಮಾರ್ಚ್ 8ರಂದು ಆಚರಿಸಲಾಗುತ್ತದೆ. ಜಗತ್ತು ನಮ್ಮನ್ನು ನಮ್ಮಲ್ಲಿರುವ ಮಹಿಳೆಯನ್ನು ಸಂಭ್ರಮಿಸಲು ಜ್ಞಾಪಿಸುತ್ತದೆ.

ಹೇಗೆ ಇಂತಹ ಐತಿಹಾಸಿಕ ದಿನ "United Nations ನಿಂದ" "International Women's Day" ಎಂದು ಕರೆಯಲ್ಪಟ್ಟಿದೆ ಎಂದರೆ :

- 1908ನೇ ಇಸವಿಯ ನ್ಯೂಯಾರ್ಕ್ ಸಿಟಿಯ ಗಾರ್ಮೆಂಟ್ ಮುಷ್ಕರ (ಹೆಣ್ಣುಮಕ್ಕಳು ಹೆಚ್ಚು ದುಡಿಯುವ ಸಂಸ್ಥೆಗಳು).
- 1910–11ರ ಕ್ಲಾರಾ ಜೆಟ್ಕಿನಳ ಕೋಪೆನ್‌ಹೇಗನ್ ಚಳುವಳಿ ಮಹಿಳೆಯರ ಹಕ್ಕುಗಳಿಗೆ, ಔದ್ಯೋಗಿಕ ಸುರಕ್ಷತೆ, ಸಮಾನ ಅವಕಾಶ ಮುಂತಾದ ವಿಷಯಗಳನ್ನು ಕುರಿತು.
- ಇದೇ ಸಮಯದಲ್ಲಿ ಜರ್ಮನಿ, ಡೆನ್‌ಮಾರ್ಕ್‌ಗಳಲ್ಲಿ ಮಹಿಳೆಯರ ಸಾಮೂಹಿಕ ಬೆಳವಣಿಗೆ, ಮತದಾನ ಹಕ್ಕು ವಿರುದ್ಧದ ದನಿ.
- 1917ರ ರಷ್ಯಾದ ಮಹಿಳೆಯರ ಮುಷ್ಕರ, "Bread and Peace" ಮುಂದುವರೆದು ರಷ್ಯಾದ ಕ್ರಾಂತಿಗೆ ಕಾರಣವಾದುದು – ಮಾನವ ಹಕ್ಕು, ಮತದಾನದ ಹಕ್ಕು, ತಾರತಮ್ಯದ ವಿರುದ್ಧ ದನಿ ಇದೆಲ್ಲ ಮುಂದುವರೆದು ಮಾರ್ಚ್ 8ನೇ ತಾರೀಖನ್ನು ಅಧಿಕೃತವಾಗಿ ಮಹಿಳಾ ದಿನಾಚರಣೆಯ ದಿನವಾಗಿ ಪರಿಗಣಿಸಲಾಯಿತು.
- ಹೀಗೆ ಶುರುವಾಗಿ: 1975ನೇ ಇಸವಿಯನ್ನು ಅಂತರರಾಷ್ಟ್ರೀಯ ಮಹಿಳಾ ವರ್ಷ ಎಂದು ಕರೆಯಲ್ಪಟ್ಟಿತು.

1977ನೇ ಇಸವಿಯಲ್ಲಿ ಅಧಿಕೃತವಾಗಿ UN ಮಾರ್ಚ್ 8ನೇ ತಾರೀಖನ್ನು "ಅಂತರರಾಷ್ಟ್ರೀಯ ಮಹಿಳಾ ದಿನ" ವನ್ನಾಗಿ ಘೋಷಿಸಿತು.

ಅಂದಿನಿಂದ ನಾವುಗಳು ಇದನ್ನು ವಿವಿಧ ಕಡೆಗಳಲ್ಲಿ, ವಿವಿಧ ರೀತಿಯಲ್ಲಿ ಆಚರಿಸಿಕೊಂಡು ಬಂದು, ಸಂತೋಷಿಸುತ್ತಿದ್ದೇವೆ. ಮಾರ್ಚ್ 8ರ ಹಿಂದಿನ ದಿನಗಳಲ್ಲಾಗಲಿ, ಮಾರ್ಚ್ 8ರ ಮುಂದಿನ ದಿನಗಳಲ್ಲಾಗಲಿ ಮಹಿಳೆಯರ ಜೀವನದಲ್ಲಿ 8ರ ಪ್ರಾಮುಖ್ಯತೆ, ಜಾತಿ, ಲಿಂಗ, ವರ್ಗ ಸಮಾನತೆಯ ಸಂಭ್ರಮ ತಂದಿದೆಯೇ ಎನ್ನುವುದು ನಿಗೂಢ ಪ್ರಶ್ನೆ!

ನಾನು ಮಹಿಳೆಯಾಗಿರುವುದನ್ನು ಉತ್ಸುಕತೆಯಿಂದ ಮೆರೆಯಲು ಕೆಲವು ಕಾರಣಗಳಿಂದ ನನಗೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಇದು ನನ್ನನ್ನು ಶ್ರೀ ಕೃಷ್ಣನ ವಾಸಸ್ಥಾನಗಳಾದ ಮಧುರಾ, ವೃಂದಾವನಗಳಲ್ಲಿ ಪರಿತ್ಯಕ್ತರಾದ ಲಕ್ಷಾಂತರ ಹೆಣ್ಣುಮಕ್ಕಳ ಚಿತ್ರಣಗಳನ್ನು ನನ್ನ ಕಣ್ಣ ಮುಂದೆ ತರುತ್ತದೆ. ಅವರ ದಯನೀಯ ಸ್ಥಿತಿ, ಕರುಣಾಜನಕ ಮುಖಗಳು ನನ್ನನ್ನು ನಿರಂತರವಾಗಿ ಪೀಡಿಸುತ್ತವೆ. ಇವರೆಲ್ಲ ಹೆಸರಿಲ್ಲದ, ಲೆಕ್ಕವಿಲ್ಲದ ತಮ್ಮ ಅಸ್ಮಿತೆಯನ್ನು ಕಳೆದುಕೊಂಡಿರುವ ಅಭಾಗಿನಿಯರು. ಇವರೆಲ್ಲ ತಮ್ಮ ಕುಟುಂಬದವರಿಗೆ ಇರಿಸು ಮುರುಸಾಗಿ ಕಂಡು ಕೇಳಿರದ ಈ ಪಟ್ಟಣದಲ್ಲಿ ತಮ್ಮ ಬದುಕನ್ನು ಅನಿವಾರ್ಯವಾಗಿ ಸಾವಿನವರೆಗೂ ದೂಡಲು ಬಂದಿರುವವರು – ತಮ್ಮ ಆಯ್ಕೆಯಿಂದಲ್ಲ.

